रेलवे भर्ती बोर्ड / RAILWAY RECRUITMENT BOARDS

सी ई एन ०६/२०२४ - एन टी पी सी पूर्व स्नातक स्तर - CEN - 06/2024 - NTPC Under Graduate Level

# RRB NTPC UG 2024 CBT 2

Under Graduate Level | CEN 06/2024

**KANNADA ANSWER KEY**

## Official Answer Key with Solutions

All 1 Shifts · 20-12-2025 to 20-12-2025

| | |
|---|---|
| **Questions** | 120 |
| **Marking** | +1 correct / -1/3 wrong |
| **Duration** | 90 minutes |
| **Sections** | General Awareness 50 · Maths 35 · Reasoning 35 |

Every paper here is the official RRB response sheet with the correct answer marked.

### HOW TO USE THIS BOOK

1. Open the INDEX on the next page.
2. Click any row to jump straight to that date and shift.
3. Correct options are ticked in green, wrong ones crossed in red.
4. Use the bookmarks panel of your PDF reader to move between shifts.

Check your marks, normalized score and zone-wise rank free at
**rank.qmaths.in**

**Blackbook**

Score & Rank Calculator · rank.qmaths.in

Compiled 11 September 2026

# INDEX · Click any row to open that paper

RRB NTPC UG 2024 CBT 2 (Kannada) · 1 shifts


| DAY | DATE | SHIFT | TIME | PAGE |
|---|---|---|---|---|
| Day 1 | **20-12-2025** | Shift 1 | 16:30 - 18:00 | 3 |

रेलवे भर्ती बोर्ड / RAILWAY RECRUITMENT BOARDS

सी ई एन ०६/२०२४ - एन टी पी सी पूर्व स्नातक स्तर - CEN - 06/2024 - NTPC Under Graduate Level

| | |
|---|---|
| Test Center Name | iON Digital Zone iDZ Shiye |
| Test Date | 20/12/2025 |
| Test Time | 4:30 PM - 6:00 PM |
| Subject | RRB NTPC Under Graduate CBT 2 |

*** Note**

**Correct Answer will carry 1 mark per Question.**

**Incorrect Answer will carry 1/3 Negative mark per Question.**

**1. Options shown in green color with a tick icon are correct.**

**2. Chosen option on the right of the question indicates the option selected by the candidate.**

Section : **RRB NTPC Under Graduate CBT 2**

**Q.1** **ಒಂದು ನಿರ್ದಿಷ್ಟ ಸಂಕೇತ ಭಾಷೆಯಲ್ಲಿ,**
**A + B ಎಂದರೆ 'A ಅವರು B ಅವರ ಮಗ',**
**A # B ಎಂದರೆ 'A ಅವರು B ಅವರ ಸಹೋದರಿ',**
**A x B ಎಂದರೆ 'A ಅವರು B ಅವರ ಪತ್ನಿ' ಮತ್ತು**
**A & B ಎಂದರೆ 'A ಅವರು B ಅವರ ತಂದೆ'.**
**ಮೇಲಿನ ತರ್ಕವನ್ನು ಆಧರಿಸಿ, ಒಂದು ವೇಳೆ 'S + G & J # K x T' ಆಗಿದ್ದರೆ, S ಅವರು T ಅವರಿಗೆ ಹೇಗೆ ಸಂಬಂಧಿ?**

**Ans**
- ✗ 1. ಸಹೋದರ
- ✗ 2. ಪತ್ನಿಯ ತಂದೆ
- ✓ 3. ಪತ್ನಿಯ ಸಹೋದರ
- ✗ 4. ತಂದೆ

**Q.2** **ಇಂಗ್ಲಿಷ್ ವರ್ಣಮಾಲೆಯ ಕ್ರಮವನ್ನು ಆಧರಿಸಿ, ಈ ಕೆಳಗಿನ ನಾಲ್ಕರಲ್ಲಿ ಮೂರು ಅಕ್ಷರ-ಗುಚ್ಛ ಜೋಡಿಗಳು ಒಂದು ನಿರ್ದಿಷ್ಟ ರೀತಿಯಲ್ಲಿ ಸದೃಶ್ಯವಾಗಿದ್ದು ಒಂದೇ ಗುಂಪಿಗೆ ಸೇರಿವೆ. ಆ ಗುಂಪಿಗೆ ಸೇರದ ಅಕ್ಷರ-ಗುಚ್ಛ ಜೋಡಿಯು ಯಾವುದು?**
**(ಸೂಚನೆ: ಗುಂಪಿಗೆ ಸೇರದ ಅಕ್ಷರ ಗುಚ್ಛವು ವ್ಯಂಜನಗಳು/ಸ್ವರಗಳ ಸಂಖ್ಯೆ ಅಥವಾ ಅಕ್ಷರ-ಗುಚ್ಛದಲ್ಲಿ ಅವುಗಳ ಸ್ಥಾನವನ್ನು ಆಧರಿಸಿ ಗುಂಪಿಗೆ ಸೇರದ್ದು ಅಲ್ಲ.)**

**Ans**
- ✓ 1. HN – TV
- ✗ 2. YH – CE
- ✗ 3. AJ – EG
- ✗ 4. CL – GI

**Q.3** **2011 ರ ಜನಗಣತಿಯ ಪ್ರಕಾರ, ಸಮತಟ್ಟಾದ ಬಯಲು ಪ್ರದೇಶ, ಫಲವತ್ತಾದ ಮಣ್ಣು ಮತ್ತು ಹೇರಳವಾದ ಮಳೆಯಿಂದಾಗಿ ಹೆಚ್ಚಿನ ಜನಸಂಖ್ಯಾ ಸಾಂದ್ರತೆಯನ್ನು ಹೊಂದಿರುವ ರಾಜ್ಯವು ಈ ಕೆಳಗಿನವುಗಳಲ್ಲಿ ಯಾವುದು?**

**Ans**
- ✗ 1. ರಾಜಸ್ಥಾನ
- ✗ 2. ಹಿಮಾಚಲ ಪ್ರದೇಶ
- ✗ 3. ಗುಜರಾತ್
- ✓ 4. ಕೇರಳ

Generated by rank.qmaths.in

Get the Toppers Choice
BLACKBOOK VOCAB APP - Download Now
GET IT ON Google Play

**Q.4** 2025ರಲ್ಲಿ ಮಹಿಳಾ ಪ್ರೀಮಿಯರ್ ಲೀಗ್‌ನ 3ನೇ ಆವೃತ್ತಿಯನ್ನು ಗೆದ್ದ ತಂಡ ಯಾವುದು?

**Ans**
- ✗ 1. ರಾಯಲ್ ಚಾಲೆಂಜರ್ಸ್ ಬೆಂಗಳೂರು
- ✓ 2. ಮುಂಬೈ ಇಂಡಿಯನ್ಸ್
- ✗ 3. ಗುಜರಾತ್ ಜೈಂಟ್ಸ್
- ✗ 4. ಡೆಲ್ಲಿ ಕ್ಯಾಪಿಟಲ್ಸ್

**Q.5** D, E, F, G, O, P ಮತ್ತು Q ಎಂಬ ಎಲ್ಲರೂ ಒಂದು ನೇರವಾದ ಸಾಲಿನಲ್ಲಿ ಉತ್ತರ ದಿಕ್ಕಿಗೆ ಮುಖಮಾಡಿ ಕುಳಿತಿದ್ದಾರೆ. ಕೇವಲ ಮೂರು ಜನರು E ಅವರ ಎಡಕ್ಕೆ ಕುಳಿತಿದ್ದಾರೆ. ಕೇವಲ O ಅವರು G ಅವರ ಬಲಕ್ಕೆ ಕುಳಿತಿದ್ದಾರೆ. ಕೇವಲ ಮೂರು ಜನರು G ಮತ್ತು F ನಡುವೆ ಕುಳಿತಿದ್ದಾರೆ. Q ಅವರು P ಅವರ ಎಡಭಾಗದ ಸ್ಥಾನವೊಂದರಲ್ಲಿ ಆದರೆ D ಅವರ ಬಲಭಾಗದ ಸ್ಥಾನವೊಂದರಲ್ಲಿ ಕುಳಿತಿದ್ದಾರೆ. ಹಾಗಾದರೆ D ಮತ್ತು P ನಡುವೆ ಎಷ್ಟು ಜನರು ಕುಳಿತಿದ್ದಾರೆ?

**Ans**
- ✗ 1. ಎರಡು
- ✗ 2. ನಾಲ್ಕು
- ✗ 3. ಒಂದು
- ✓ 4. ಮೂರು

**Q.6** ಇಂಗ್ಲೀಷ್ ವರ್ಣಮಾಲೆಯ ಅನುಕ್ರಮವನ್ನು ಆಧರಿಸಿ, ಕೆಳಗೆ ಕೊಟ್ಟಿರುವ ಸರಣಿಯಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಯಾವುದು ಸರಿಹೊಂದುತ್ತದೆ?

ULE RHZ ODU LZP ?

**Ans**
- ✓ 1. IVK
- ✗ 2. HUL
- ✗ 3. JWK
- ✗ 4. HWJ

**Q.7** ಕೆಳಗೆ ಕೊಟ್ಟಿರುವ ಸರಣಿಯಲ್ಲಿನ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಯಾವ ಸಂಖ್ಯೆ ಸರಿಹೊಂದುತ್ತದೆ?

30 40 50 60 70 ?

**Ans**
- ✗ 1. 77
- ✗ 2. 78
- ✓ 3. 80
- ✗ 4. 79

**Q.8** ಒಂದು ಹೆಲ್ತ್ ಕ್ಲಬ್‌ನಲ್ಲಿ 55% ರಷ್ಟು ಸದಸ್ಯರು ಮಹಿಳೆಯರು ಮತ್ತು 45% ರಷ್ಟು ಸದಸ್ಯರು ಪುರುಷರಾಗಿದ್ದಾರೆ. ಒಂದು ವೇಳೆ ಪುರುಷರ ಸರಾಸರಿ ವಯಸ್ಸು 95 ವರ್ಷಗಳು ಮತ್ತು ಮಹಿಳೆಯರ ಸರಾಸರಿ ವಯಸ್ಸು 85 ವರ್ಷಗಳು ಆಗಿದ್ದರೆ, ಎಲ್ಲಾ ಸದಸ್ಯರ ಸರಾಸರಿ ವಯಸ್ಸು (ವರ್ಷಗಳಲ್ಲಿ) ಎಷ್ಟು?

**Ans**
- ✗ 1. 79.3
- ✓ 2. 89.5
- ✗ 3. 83.9
- ✗ 4. 87.8

**Q.9** ಒಬ್ಬ ಅಂಗಡಿಯವನು ಒಂದು ವಸ್ತುವಿನ ನಮೂದಿತ ಬೆಲೆಯ ಮೇಲೆ 15% ವ್ಯಾಪಾರ ರಿಯಾಯಿತಿಯನ್ನು ನೀಡಿದನು. ಆ ವಸ್ತುವಿನ ನಮೂದಿತ ಬೆಲೆ ₹6500 ಆಗಿದ್ದರೆ, ಅದರ ಮಾರಾಟ ಬೆಲೆ ಎಷ್ಟು (₹ ಗಳಲ್ಲಿ)?

**Ans**
- ✓ 1. 5525
- ✗ 2. 5255
- ✗ 3. 5552
- ✗ 4. 5200

Get the Toppers Choice
BLACKBOOK VOCAB APP - Download Now
GET IT ON Google Play

**Q.10** ಈ ಕೆಳಗೆ ಕೊಟ್ಟಿರುವ ಗಣಿತೋಕ್ತಿಯನ್ನು ಸರಳೀಕರಿಸಿ:

$$3^5 - \left(\frac{1}{3}\right)^{-5} + \sqrt{\frac{27^{12} + 9^{13}}{27^6 + 9^{14}}}$$

**Ans**
✔ 1. 81
✘ 2. 243
✘ 3. 27
✘ 4. 69

**Q.11** ಈ ಕೆಳಗಿನ ಸಂಖ್ಯಾ-ಗಣಗಳಲ್ಲಿನ ಸಂಖ್ಯೆಗಳು ಯಾವ ರೀತಿ ಒಂದಕ್ಕೊಂದು ಸಂಬಂಧ ಹೊಂದಿವೆಯೋ ಅದೇ ರೀತಿಯ ಸಂಬಂಧವನ್ನು ಹೊಂದಿರುವ ಸಂಖ್ಯಾ-ಗಣವನ್ನು ಕೊಟ್ಟಿರುವ ಆಯ್ಕೆಗಳಿಂದ ಆರಿಸಿ.
(ಸೂಚನೆ: ಸಂಖ್ಯೆಗಳನ್ನು ಅವುಗಳ ಬಿಡಿ ಅಂಕಿಗಳಾಗಿ ವಿಭಜಿಸದೆ, ಪೂರ್ಣ ಸಂಖ್ಯೆಗಳ ಮೇಲೆ ಗಣಿತದ ಕ್ರಿಯೆಗಳನ್ನು ಮಾಡಬೇಕು. ಉದಾ. 13 – 13 ರ ಮೇಲೆ ಕೂಡಿಸುವುದು/ಕಳೆಯುವುದು/ಗುಣಿಸುವುದು ಮುಂತಾದ ಕ್ರಿಯೆಗಳನ್ನು ಮಾಡುವಾಗ 13 ಎಂದು ಪರಿಗಣಿಸಿ ಕ್ರಿಯೆಗಳನ್ನು ಮಾಡಬಹುದು. 13 ಅನ್ನು 1 ಮತ್ತು 3 ಎಂದು ಬೇರೆ ಬೇರೆಯಾಗಿ ಪರಿಗಣಿಸಿ ನಂತರ 1 ಮತ್ತು 3 ರ ಮೇಲೆ ಬೇರೆ ಬೇರೆಯಾಗಿ ಗಣಿತದ ಕ್ರಿಯೆಗಳನ್ನು ಮಾಡುವಂತಿಲ್ಲ.)

(5, 14, 24)
(3, 10, 16)

**Ans**
✔ 1. (7, 18, 32)
✘ 2. (4, 12, 28)
✘ 3. (6, 8, 12)
✘ 4. (9, 14, 24)

**Q.12** 21 cm ಆಂತರಿಕ ವ್ಯಾಸವುಳ್ಳ ಒಂದು ಸಿಲಿಂಡರಾಕಾರದ ಕೊಳವೆಯ ಮೂಲಕ 8 m/s ದರದಲ್ಲಿ ನೀರು ಹರಿಯುತ್ತದೆ. ಹಾಗಾದರೆ 12 m x 9 m x 4.41 m ಅಳತೆಯ ಆಯತಾಕಾರದ ಒಂದು ಖಾಲಿ ತೊಟ್ಟಿಯನ್ನು ಸಂಪೂರ್ಣವಾಗಿ ತುಂಬಿಸಲು ಈ ಕೊಳವೆಗೆ (ನಿಮಿಷಗಳಲ್ಲಿ) ಎಷ್ಟು ಸಮಯ ಬೇಕಾಗಬಹುದು?
(ಒಂದು ದಶಮಾಂಶ ಸ್ಥಾನಕ್ಕೆ ಸರಿಹೊಂದಿಸಿ) ($\pi = \frac{22}{7}$ ಬಳಸಿ)

**Ans**
✘ 1. 36.8 ನಿಮಿಷಗಳು
✔ 2. 28.6 ನಿಮಿಷಗಳು
✘ 3. 30 ನಿಮಿಷಗಳು
✘ 4. 27.5 ನಿಮಿಷಗಳು

**Q.13** Refer to the following letter series and answer the question that follows. (Counting to be done from left to right only.)

(Left) K O P Q W S E D G U J I O P K M N V Y I P O (Right)

How many such consonants are there, each of which is immediately preceded by a vowel and also immediately followed by a vowel?

**Ans**
✔ 1. Two
✘ 2. One
✘ 3. More than two
✘ 4. None

**Q.14** A ರೈಲು ಬೆಳಿಗ್ಗೆ 7:20 ಕ್ಕೆ M ನಿಲ್ದಾಣದಿಂದ ಹೊರಟು ಅದೇ ದಿನ ಮಧ್ಯಾಹ್ನ 3:20 ಕ್ಕೆ N ನಿಲ್ದಾಣವನ್ನು ತಲುಪುತ್ತದೆ. B ರೈಲು ಬೆಳಿಗ್ಗೆ 9:20 ಕ್ಕೆ N ನಿಲ್ದಾಣದಿಂದ ಹೊರಟು ಅದೇ ದಿನ ಸಂಜೆ 4:20 ಕ್ಕೆ M ನಿಲ್ದಾಣವನ್ನು ತಲುಪುತ್ತದೆ. ಹಾಗಾದರೆ A ಮತ್ತು B ರೈಲುಗಳು ಸಂಧಿಸುವ ಸಮಯವನ್ನು ಕಂಡುಹಿಡಿಯಿರಿ.

**Ans**
✔ 1. 12:08 p.m.
✘ 2. 4:10 p.m.
✘ 3. 1:38 a.m.
✘ 4. 10:57 a.m.

Get the Toppers Choice
BLACKBOOK VOCAB APP - Download Now
GET IT ON Google Play

Q.15 ಇಂಗ್ಲಿಷ್ ವರ್ಣಮಾಲೆಯ ಕ್ರಮವನ್ನು ಆಧರಿಸಿ, ಈ ಕೆಳಗಿನ ನಾಲ್ಕರಲ್ಲಿ ಮೂರು ಅಕ್ಷರ-ಗುಚ್ಛ ಜೋಡಿಗಳು ಒಂದು ನಿರ್ದಿಷ್ಟ ರೀತಿಯಲ್ಲಿ ಸದೃಶ್ಯವಾಗಿದ್ದು ಒಂದೇ ಗುಂಪಿಗೆ ಸೇರಿವೆ. ಆ ಗುಂಪಿಗೆ **ಸೇರದ** ಅಕ್ಷರ-ಗುಚ್ಛ ಜೋಡಿಯು ಯಾವುದು?
(ಸೂಚನೆ: ಗುಂಪಿಗೆ ಸೇರದ ಅಕ್ಷರ ಗುಚ್ಛವು ವ್ಯಂಜನಗಳು/ಸ್ವರಗಳ ಸಂಖ್ಯೆ ಅಥವಾ ಅಕ್ಷರ-ಗುಚ್ಛದಲ್ಲಿ ಅವುಗಳ ಸ್ಥಾನವನ್ನು ಆಧರಿಸಿ ಗುಂಪಿಗೆ ಸೇರದ್ದು ಅಲ್ಲ.)

Ans
- ✗ 1. QR – WX
- ✓ 2. MN – SV
- ✗ 3. AB – GH
- ✗ 4. IJ – OP

Q.16 2025 ರಲ್ಲಿ ಬಿಡುಗಡೆಯಾದ ವಿಶ್ವಸಂಸ್ಥೆಯ ಮಾದಕ ದ್ರವ್ಯ ಮತ್ತು ಅಪರಾಧ ವಿಭಾಗದ ಕಚೇರಿ (United Nations Office on Drugs and Crime - UNODC) ಮತ್ತು ವಿಶ್ವ ಸಂಸ್ಥೆಯ ಮಹಿಳಾ ( UN Women) ದತ್ತಾಂಶದ ಪ್ರಕಾರ, 2024 ರಲ್ಲಿ ವಿಶ್ವಾದ್ಯಂತ ಆತ್ಮೀಯ ಜೊತೆಗಾರರು ಅಥವಾ ಕುಟುಂಬದ ಸದಸ್ಯರಿಂದ ಎಷ್ಟು ಸಮಯಕ್ಕೊಮ್ಮೆ ಮಹಿಳೆ ಅಥವಾ ಹುಡುಗಿ ಕೊಲ್ಲಲ್ಪಟ್ಟಿದ್ದಾರೆ?

Ans
- ✗ 1. ಪ್ರತಿ 30 ನಿಮಿಷಗಳಿಗೆ
- ✓ 2. ಪ್ರತಿ 10 ನಿಮಿಷಗಳಿಗೆ
- ✗ 3. ಪ್ರತಿ 5 ನಿಮಿಷಗಳಿಗೆ
- ✗ 4. ಪ್ರತಿ ಗಂಟೆಗೆ

Q.17 ಒಂದು ನಿರ್ದಿಷ್ಟ ಸಂಕೇತ ಭಾಷೆಯಲ್ಲಿ, 'bell poet visit' ಅನ್ನು 'js vx gu' ಎಂದು ಸಂಕೇತಿಸಲಾಗುತ್ತದೆ ಮತ್ತು 'yard visit queen' ಅನ್ನು 'aw ks js' ಎಂದು ಸಂಕೇತಿಸಲಾಗಿದೆ. ಹಾಗಾದರೆ ಕೊಟ್ಟಿರುವ ಭಾಷೆಯಲ್ಲಿ 'visit' ಅನ್ನು ಹೇಗೆ ಸಂಕೇತಿಸಲಾಗುತ್ತದೆ?

Ans
- ✗ 1. aw
- ✗ 2. vx
- ✗ 3. gu
- ✓ 4. js

Q.18 ಭಾರತದ ಮರುಭೂಮಿ ಪ್ರದೇಶದಲ್ಲಿನ ಅತ್ಯಂತ ಉದ್ದವಾದ ನದಿ ಯಾವುದು?

Ans
- ✗ 1. ಗಂಗಾ
- ✗ 2. ಬ್ರಹ್ಮಪುತ್ರ
- ✓ 3. ಲೂನಿ
- ✗ 4. ಯಮುನಾ

Q.19 ಈ ಕೆಳಗಿನ ಆಯ್ಕೆಗಳಲ್ಲಿನ ಯಾವ ಅಕ್ಷರ-ಸಂಖ್ಯಾ ಸಮೂಹವನ್ನು ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಹಾಕಿದಾಗ ಸರಣಿಯು ತಾರ್ಕಿಕವಾಗಿ ಪೂರ್ಣಗೊಳ್ಳುತ್ತದೆ?

MID 6; OKF 12; QMH 18; SOJ 24; ?

Ans
- ✗ 1. SRL 28
- ✗ 2. URL 30
- ✗ 3. UPL 32
- ✓ 4. UQL 30

Q.20 10 ಸಂಖ್ಯೆಗಳ ಮೊತ್ತವು 612 ಆಗಿದೆ. ಹಾಗಾದರೆ ಅವುಗಳ ಸರಾಸರಿಯನ್ನು ಕಂಡುಹಿಡಿಯಿರಿ.

Ans
- ✗ 1. 60.2
- ✓ 2. 61.2
- ✗ 3. 59.2
- ✗ 4. 62.2

Get the Toppers Choice
BLACKBOOK VOCAB APP - Download Now
GET IT ON Google Play

**Q.21** ಈ ಕೆಳಗಿನವುಗಳಲ್ಲಿ ಯಾವುದು ಭಾರತ ಸರ್ಕಾರವು ಬಡತನ ನಿವಾರಣೆಗಾಗಿ ಅನುಸರಿಸುತ್ತಿರುವ ಮೂರು ವಿಧಾನಗಳಲ್ಲಿ ಒಂದಾಗಿಲ್ಲ?

Ans
- ✗ 1. ಸಾಮಾಜಿಕ ಬಳಕೆಯ ಅಗತ್ಯಗಳಿಗಾಗಿ ಸಾರ್ವಜನಿಕ ವೆಚ್ಚದ ಮೂಲಕ ಜನರಿಗೆ ಕನಿಷ್ಠ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು
- ✗ 2. ಹೆಚ್ಚುವರಿ ಸ್ವತ್ತುಗಳನ್ನು ಸೃಷ್ಟಿಸುವ ಮೂಲಕ ಮತ್ತು ಕೆಲಸವನ್ನು ಸೃಷ್ಟಿಸುವ ಮೂಲಕ ಬಡವರ ಆದಾಯ ಮತ್ತು ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು
- ✓ 3. ವಿವಿಧ ಹಂತದ ಕೌಶಲ್ಯಗಳನ್ನು ಹೊಂದಿರುವ ಕಾರ್ಮಿಕರಿಗೆ ಕನಿಷ್ಠ ಮಟ್ಟದ ಸಂಭಾವನೆ ಅಥವಾ ವೇತನ ದೊರೆಯುತ್ತಿರುವುದನ್ನು ಖಾತ್ರಿಪಡಿಸಿಕೊಳ್ಳುವುದು
- ✗ 4. ಆರ್ಥಿಕ ಬೆಳವಣಿಗೆಯು ಬಡವರಿಗೂ ಲಾಭ ತರುತ್ತದೆ ಎಂಬ ನಿರೀಕ್ಷೆಯ ಬೆಳವಣಿಗೆ-ಆಧಾರಿತ ವಿಧಾನ

**Q.22** ಒಬ್ಬ ವ್ಯಾಪಾರಿಯು ಒಂದು ಶರ್ಟ್ ಅನ್ನು ₹850 ಗೆ ಮಾರಾಟ ಮಾಡುವುದರಿಂದ 5% ನಷ್ಟವನ್ನು ಅನುಭವಿಸುತ್ತಾರೆ. ಅವರು ಅದನ್ನು ₹1,530 ಕ್ಕೆ ಮಾರಾಟ ಮಾಡಿದರೆ x% ಲಾಭವನ್ನು ಗಳಿಸುತ್ತಾರೆ. ಹಾಗಾದರೆ x ನ ಮೌಲ್ಯ ಎಷ್ಟು?

Ans
- ✗ 1. 61
- ✗ 2. 86
- ✗ 3. 81
- ✓ 4. 71

**Q.23** ಮುಕುಂದ್ ಅವರು ಒಂದು ಬ್ಯಾಂಕ್‌ನಲ್ಲಿ ₹57,000 ಮೊತ್ತವನ್ನು ಠೇವಣಿ ಇಡುತ್ತಾರೆ. ವರ್ಷಕ್ಕೊಮ್ಮೆ ಚಕ್ರಬಡ್ಡಿ ಲೆಕ್ಕಹಾಕುವ ವಿಧಾನದಲ್ಲಿ, ಮೊದಲ ವರ್ಷದಲ್ಲಿ ವಾರ್ಷಿಕವಾಗಿ ಬಡ್ಡಿದರವು 10% ಆಗಿದ್ದರೆ ಮತ್ತು ಎರಡನೇ ವರ್ಷದಲ್ಲಿ ವಾರ್ಷಿಕವಾಗಿ 3% ರಷ್ಟು ಹೆಚ್ಚಾದರೆ, ಅವರು 2 ವರ್ಷಗಳಲ್ಲಿ ಎಷ್ಟು ಚಕ್ರ ಬಡ್ಡಿಯನ್ನು (₹ ಗಳಲ್ಲಿ) ಗಳಿಸುತ್ತಾರೆ?

Ans
- ✓ 1. 13,851
- ✗ 2. 13,651
- ✗ 3. 14,101
- ✗ 4. 13,501

**Q.24** ಇಂಗ್ಲಿಷ್ ವರ್ಣಮಾಲೆಯ ಕ್ರಮವನ್ನು ಆಧರಿಸಿ, ಈ ಕೆಳಗಿನ ನಾಲ್ಕರಲ್ಲಿ ಮೂರು ಅಕ್ಷರ-ಗುಚ್ಛಗಳು ಒಂದು ನಿರ್ದಿಷ್ಟ ರೀತಿಯಲ್ಲಿ ಸದೃಶ್ಯವಾಗಿದ್ದು ಒಂದೇ ಗುಂಪಿಗೆ ಸೇರಿವೆ. ಆ ಗುಂಪಿಗೆ **ಸೇರದ** ಅಕ್ಷರ-ಗುಚ್ಛ ಯಾವುದು? (ಸೂಚನೆ: ಗುಂಪಿಗೆ ಸೇರದ ಅಕ್ಷರ ಗುಚ್ಛವು ವ್ಯಂಜನಗಳು/ಸ್ವರಗಳ ಸಂಖ್ಯೆ ಅಥವಾ ಅಕ್ಷರ-ಗುಚ್ಛದಲ್ಲಿ ಅವುಗಳ ಸ್ಥಾನವನ್ನು ಆಧರಿಸಿ ಗುಂಪಿಗೆ ಸೇರದ್ದು ಅಲ್ಲ.)

Ans
- ✗ 1. KIH
- ✗ 2. ZXW
- ✓ 3. SQO
- ✗ 4. GED

**Q.25** ಒಂದು ಮನೆಯ ಮೇಲೆ ಒಂದು ಕಂಬವನ್ನು ಸ್ಥಾಪಿಸಲಾಗಿದೆ. ಮನೆಯ ಎತ್ತರ 25 ಮೀಟರುಗಳಾಗಿದೆ. ನೆಲದ ಮೇಲಿರುವ P ಬಿಂದುವಿನಿಂದ ಆ ಮನೆಯ ತುದಿಗೆ ಇರುವ ಉನ್ನತ ಕೋನ $45^\circ$ ಆಗಿದೆ ಮತ್ತು ಅದೇ P ಬಿಂದುವಿನಿಂದ ಮನೆಯ ಮೇಲಿನ ಕಂಬದ ತುದಿಗೆ ಇರುವ ಉನ್ನತ ಕೋನ $60^\circ$ ಆಗಿದೆ. P ಬಿಂದುವು ನೆಲಮಟ್ಟದಲ್ಲಿದೆ. ಹಾಗಾದರೆ ಆ ಕಂಬದ ಎತ್ತರ (ಮೀಟರುಗಳಲ್ಲಿ) ಎಷ್ಟು?

Ans
- ✗ 1. $25(\sqrt{2}-1)$
- ✗ 2. $20(\sqrt{3}-1)$
- ✗ 3. $20(\sqrt{3}+1)$
- ✓ 4. $25(\sqrt{3}-1)$

**Q.26** ಈ ಕೆಳಗಿನವುಗಳಲ್ಲಿ ಯಾವ ಕ್ರೀಡಾ ಪದವು ಕ್ರಿಕೆಟ್‌ಗೆ **ಸಂಬಂಧಿಸಿಲ್ಲ**?

Ans
- ✗ 1. ಕವರ್ ಡ್ರೈವ್
- ✗ 2. ಎಲ್‌ಬಿಡಬ್ಲ್ಯೂ
- ✓ 3. ರೈಡರ್
- ✗ 4. ಪವರ್ ಪ್ಲೇ

Get the Toppers Choice
BLACKBOOK VOCAB APP - Download Now
GET IT ON Google Play

Q.27 Which of the following is NOT among the six fundamental rights provided in Part III of the Indian Constitution?

Ans
✔ 1. Right to Religious Education
✘ 2. Right to Freedom
✘ 3. Right against Exploitation
✘ 4. Right to Equality

Q.28 ಏಪ್ರಿಲ್ 2024 ರಲ್ಲಿ ಬಿಡುಗಡೆಯಾದ 'ದಿ ಲಾ ಅಂಡ್ ಸ್ಪಿರಿಚುವಾಲಿಟಿ: ರೀಕನೆಕ್ಟಿಂಗ್ ದ ಬಾಂಡ್' ಎಂಬ ಪುಸ್ತಕದ ಲೇಖಕರು ಯಾರು?

Ans
✘ 1. ಗೀತಾ ಸಿಂಗ್ ಮತ್ತು ಆರಿಫ್ ಖಾನ್ ಭಾರತಿ
✘ 2. ಆರ್.ಕೆ. ಪಚ್ನಂದಾ ಮತ್ತು ಉತ್ತಮ್ ಕುಮಾರ್ ಸಿನ್ಹಾ
✔ 3. ರಮಣ್ ಮಿತ್ತಲ್ ಮತ್ತು ಸೀಮಾ ಸಿಂಗ್
✘ 4. ಅಶೋಕ್ ಕುಮಾರ್ ಮತ್ತು ಓ.ಪಿ. ಮನೋಚಾ

Q.29 ಉತ್ತರಕ್ಕೆ ಮುಖ ಮಾಡಿರುವ 48 ಜನರ ಸಾಲಿನಲ್ಲಿ, ಮೋಹಿತ್ ಅವರು ಬಲ ತುದಿಯಿಂದ 14ನೇ ಸ್ಥಾನದಲ್ಲಿ ಕುಳಿತಿದ್ದಾರೆ. ಒಂದು ವೇಳೆ ಹರಿಣಿ ಅವರು ಸಾಲಿನ ಎಡ ತುದಿಯಿಂದ 15ನೇ ಸ್ಥಾನದಲ್ಲಿ ಕುಳಿತಿದ್ದರೆ, ಮೋಹಿತ್ ಮತ್ತು ಹರಿಣಿ ಅವರ ನಡುವೆ ಎಷ್ಟು ಜನರು ಕುಳಿತಿದ್ದಾರೆ?

Ans
✘ 1. 16
✘ 2. 18
✔ 3. 19
✘ 4. 21

Q.30 'ಆಧುನಿಕ ಭಾರತೀಯ ಕಲೆಯ ಪಿತಾಮಹ' ಎಂದು ಕರೆಯಲ್ಪಡುವ ಮತ್ತು ಶಕುಂತಲಾ, ರಂಗ ರಸಿಯಂತಹ ಕೃತಿಗಳಿಗೆ ಹೆಸರುವಾಸಿಯಾದವರು ಯಾರು?

Ans
✘ 1. ನಂದಲಾಲ್ ಬೋಸ್
✘ 2. ಅಭನೀಂದ್ರನಾಥ ಟ್ಯಾಗೋರ್
✔ 3. ರಾಜಾ ರವಿ ವರ್ಮಾ
✘ 4. ರವೀಂದ್ರನಾಥ ಟ್ಯಾಗೋರ್

Q.31 ಇಂಗ್ಲಿಷ್ ವರ್ಣಮಾಲೆಯ ಕ್ರಮವನ್ನು ಆಧರಿಸಿ EFHE ಎಂಬುದು ಒಂದು ವಿಶಿಷ್ಟ ರೀತಿಯಲ್ಲಿ IJLI ಗೆ ಸಂಬಂಧಿಸಿದೆ. ಅದೇ ರೀತಿಯಲ್ಲಿ, IJLI ಎಂಬುದು MNPM ಗೆ ಸಂಬಂಧಿಸಿದೆ. ಅದೇ ತರ್ಕವನ್ನು ಅನುಸರಿಸಿದರೆ, PQSP ಎಂಬುದು ಕೊಟ್ಟಿರುವ ಆಯ್ಕೆಗಳಲ್ಲಿ ಯಾವ ಆಯ್ಕೆಗೆ ಸಂಬಂಧಿಸಿದೆ?

Ans
✘ 1. TTVT
✔ 2. TUWT
✘ 3. TVVY
✘ 4. TUVT

Q.32 ಈ ಕೆಳಗಿನವುಗಳಲ್ಲಿ ಯಾವುದು ಮಾನವ ಅಭಿವೃದ್ಧಿ ಸೂಚ್ಯಂಕದ (HDI) ಒಂದು ಆಯಾಮವಲ್ಲ?

Ans
✔ 1. ಮಿಲಿಟರಿ ಬಲ ಮತ್ತು ರಕ್ಷಣಾ ವೆಚ್ಚ
✘ 2. ಜೀವನ ಮಟ್ಟ ಮತ್ತು ಸಂಪನ್ಮೂಲಗಳ ಮೇಲೆ ನಿಯಂತ್ರಣ
✘ 3. ಶಿಕ್ಷಣ ಮತ್ತು ಜ್ಞಾನದ ಸಂಪಾದನೆ
✘ 4. ದೀರ್ಘ ಮತ್ತು ಆರೋಗ್ಯಕರ ಜೀವನ

Q.33 ಒಂದು ವೇಳೆ '+' ಮತ್ತು '−' ಗಳನ್ನು ಪರಸ್ಪರ ಅದಲು ಬದಲು ಮಾಡಿದರೆ ಮತ್ತು '×' ಮತ್ತು '÷' ಗಳನ್ನು ಪರಸ್ಪರ ಅದಲು ಬದಲು ಮಾಡಿದರೆ, ಈ ಕೆಳಗಿನ ಸಮೀಕರಣದಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಯಾವ ಸಂಖ್ಯೆ ಬರುತ್ತದೆ?

3 ÷ 2 + 15 × 3 - 5 = ? + 10

Ans
✔ 1. 16
✘ 2. 17
✘ 3. 13
✘ 4. 15

Get the Toppers Choice
BLACKBOOK VOCAB APP - Download Now
GET IT ON Google Play

Q.34 Read the given statements and conclusions carefully. Assuming that the information given in the statements is true, even if it appears to be at variance with commonly known facts, decide which of the given conclusion(s) logically follow(s) from the statements.

**Statements:**
Some kings are drills.
All clamps are drills.

**Conclusions:**
(I) Some kings are clamps.
(II) All drills are clamps.

Ans
- ✗ 1. Only conclusion (II) follows.
- ✗ 2. Only conclusion (I) follows.
- ✓ 3. Neither conclusion (I) nor (II) follows.
- ✗ 4. Both conclusions (I) and (II) follow.

Q.35 ಮೌಲ್ಯಮಾಪನ ಮಾಡಿ:

$$\sqrt{\left(31+\sqrt{\left((15+\sqrt{\left(97+\sqrt{\left(7+\sqrt{(4)}\right)}\right)}\right)}\right)}$$

Ans
- ✗ 1. 5
- ✓ 2. 6
- ✗ 3. 9
- ✗ 4. 4

Q.36 ಕೃಷಿ ಚಟುವಟಿಕೆಗಳ ವೈವಿಧ್ಯೀಕರಣವು ಗ್ರಾಮೀಣ ಸಮೃದ್ಧಿಗೆ ಹೇಗೆ ಕೊಡುಗೆ ನೀಡುತ್ತದೆ?

Ans
- ✗ 1. ಕೃಷಿ ಉತ್ಪಾದಕತೆಯನ್ನು ಕಡಿಮೆ ಮಾಡುವ ಮೂಲಕ
- ✗ 2. ಪ್ರಮುಖ ಬೆಳೆಗಳ ಮೇಲೆ ಮಾತ್ರ ಗಮನ ಕೇಂದ್ರೀಕರಿಸುವ ಮೂಲಕ
- ✗ 3. ಸಾಂಪ್ರದಾಯಿಕ ಬೆಳೆ ಮಾದರಿಗಳ ಮೇಲಿನ ಅವಲಂಬನೆಯನ್ನು ಹೆಚ್ಚಿಸುವ ಮೂಲಕ
- ✓ 4. ಬದಲಿ ಆದಾಯದ ಮೂಲಗಳನ್ನು ಒದಗಿಸುವ ಮೂಲಕ ಮತ್ತು ಕೃಷಿಯನ್ನು ಚೇತರಿಸುವ ಮೂಲಕ

Q.37 2025 ರ ಭಾರತದ ಇಂಧನ ಅಂಕಿಅಂಶಗಳ (Energy Statistics India) ಪ್ರಕಾರ, ಮಾರ್ಚ್ 2025 ರ ವೇಳೆಗೆ ಭಾರತದ ಒಟ್ಟು ನವೀಕರಿಸಬಹುದಾದ ಶಕ್ತಿಯ ಅಂದಾಜು ಸಾಮರ್ಥ್ಯಕ್ಕೆ ಈ ಕೆಳಗಿನ ಯಾವ ನವೀಕರಿಸಬಹುದಾದ ಶಕ್ತಿಯ ಮೂಲವು ಅತಿದೊಡ್ಡ ಪಾಲನ್ನು ನೀಡುತ್ತದೆ?

Ans
- ✗ 1. ಜಲಶಕ್ತಿ
- ✗ 2. ಜೈವಿಕರಾಶಿ ಶಕ್ತಿ
- ✓ 3. ಪವನ ಶಕ್ತಿ
- ✗ 4. ಸೌರಶಕ್ತಿ

Q.38 ದಂತಿದುರ್ಗನು ಈ ಕೆಳಗಿನವುಗಳಲ್ಲಿ ಯಾವ ಸಾಮ್ರಾಜ್ಯವನ್ನು ಸ್ಥಾಪಿಸಿದನು?

Ans
- ✗ 1. ಪಾಲ
- ✓ 2. ರಾಷ್ಟ್ರಕೂಟ
- ✗ 3. ಗುರ್ಜರ ಪ್ರತಿಹಾರ
- ✗ 4. ಚೋಳ

Q.39 ಮುಖ್ಯ ಕೆಲಸಗಾರ (Main Worker) ಎಂದರೆ _______ ಕೆಲಸ ಮಾಡುವ ಒಬ್ಬ ವ್ಯಕ್ತಿ.

Ans
- ✗ 1. ಒಂದು ವರ್ಷದಲ್ಲಿ ಕನಿಷ್ಠಪಕ್ಷ 90 ದಿನಗಳು (ಅಥವಾ ಮೂರು ತಿಂಗಳುಗಳು)
- ✗ 2. ಒಂದು ವರ್ಷದಲ್ಲಿ ಕನಿಷ್ಠಪಕ್ಷ 153 ದಿನಗಳು (ಅಥವಾ ಐದು ತಿಂಗಳುಗಳು)
- ✗ 3. ಒಂದು ವರ್ಷದಲ್ಲಿ ಕನಿಷ್ಠಪಕ್ಷ 120 ದಿನಗಳು (ಅಥವಾ ನಾಲ್ಕು ತಿಂಗಳುಗಳು)
- ✓ 4. ಒಂದು ವರ್ಷದಲ್ಲಿ ಕನಿಷ್ಠಪಕ್ಷ 183 ದಿನಗಳು (ಅಥವಾ ಆರು ತಿಂಗಳುಗಳು)

Blackbook

Generated by rank.qmaths.in

Get the Toppers Choice
BLACKBOOK VOCAB APP - Download Now
GET IT ON Google Play

Q.40 ಭಾರತ ಸರ್ಕಾರವು ಸ್ಥಾಪಿಸಿದ ಯಾವ ಸಂಸ್ಥೆಯು 2025ರ ಮಾರ್ಚ್ ವೇಳೆಗೆ ಭಾರತದ ಬಾಹ್ಯಾಕಾಶ ಚಟುವಟಿಕೆಗಳಲ್ಲಿ ಖಾಸಗಿ ವಲಯದ ಭಾಗವಹಿಸುವಿಕೆಯನ್ನು ಹೆಚ್ಚಿಸಲು ಅನುಕೂಲವಾಗುವಂತೆ ನಿಯಂತ್ರಕ ಮತ್ತು ಉತ್ತೇಜಕ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ?

Ans
- ✗ 1. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ISRO)
- ✗ 2. ಬಾಹ್ಯಾಕಾಶ ಇಲಾಖೆ (Department of Space - DoS)
- ✗ 3. ಬಾಹ್ಯಾಕಾಶ ಅನ್ವಯಿಕೆ ಕೇಂದ್ರ (SAC)
- ✓ 4. ಭಾರತೀಯ ರಾಷ್ಟ್ರೀಯ ಬಾಹ್ಯಾಕಾಶ ಪ್ರಚಾರ ಮತ್ತು ಪ್ರಾಧಿಕಾರ ಕೇಂದ್ರ (Indian National Space Promotion and Authorization Centre - IN-SPACe)

Q.41 ಒಂದುವೇಳೆ ಈ ಕೆಳಗಿನ ಸಮೀಕರಣದಲ್ಲಿ 'I' ಎಂದರೆ '+', 'J' ಎಂದರೆ '×', 'K' ಎಂದರೆ '÷' ಮತ್ತು 'L' ಎಂದರೆ '−' ಆಗಿದ್ದರೆ, ಪ್ರಶ್ನಾರ್ಥಕ ಚಿಹ್ನೆಯ (?) ಸ್ಥಳದಲ್ಲಿ ಏನು ಬರುತ್ತದೆ?

174 K 6 J 12 I 63 L 15 K 5 I 29 J 4 K 2 L 11 = ?

Ans
- ✓ 1. 455
- ✗ 2. 574
- ✗ 3. 491
- ✗ 4. 513

Q.42 A, B ಮತ್ತು C ಎಂಬ ಮೂರು ವ್ಯಕ್ತಿಗಳ ನಡುವೆ ₹9,900 ಮೊತ್ತವನ್ನು ಹಂಚಲಾಗಿದೆ. ಒಂದು ವೇಳೆ A ಮತ್ತು C ಯ ಪಾಲುಗಳ ನಡುವಿನ ಅನುಪಾತವು 4 : 18 ಆಗಿದ್ದು, B ಯ ಪಾಲು A ಮತ್ತು C ಯ ಒಟ್ಟು ಪಾಲುಗಳ 50% ಕ್ಕೆ ಸಮ ಆಗಿದ್ದರೆ, B ಯ ಪಾಲು (₹ ಗಳಲ್ಲಿ) ಎಷ್ಟು?

Ans
- ✓ 1. 3,300
- ✗ 2. 3,298
- ✗ 3. 3,301
- ✗ 4. 3,302

Q.43 ಯಾವ ಮೊತ್ತವು (₹ ಗಳಲ್ಲಿ) ವಾರ್ಷಿಕ 20% ಬಡ್ಡಿದರದಲ್ಲಿ 4 ವರ್ಷಗಳಲ್ಲಿ ₹1,560 ಸರಳ ಬಡ್ಡಿಯನ್ನು ಗಳಿಸುತ್ತದೆ?

Ans
- ✓ 1. 1,950
- ✗ 2. 975
- ✗ 3. 1,248
- ✗ 4. 3,900

Q.44 ರೋಹಿತ್ ಎಂಬ ದಿನಸಿ ವ್ಯಾಪಾರಿಯ ಬಳಿ ಕ್ರಮವಾಗಿ ₹130 ಮತ್ತು ₹150 ಬೆಲೆಗಳ ಎರಡು ಬಗೆಯ ಕಡಲೆಹಿಟ್ಟುಗಳಿವೆ. ಈ ಎರಡೂ ಬಗೆಯ ಕಡಲೆ ಹಿಟ್ಟುಗಳನ್ನು ಯಾವ ಅನುಪಾತದಲ್ಲಿ ಬೆರೆಸಿದರೆ ಅವೆರಡರ ಮಿಶ್ರಣವು ಪ್ರತಿ kgಗೆ ₹145.50 ಆಗುತ್ತದೆ?

Ans
- ✗ 1. 7 : 31
- ✗ 2. 31 : 7
- ✓ 3. 9 : 31
- ✗ 4. 31 : 9

Q.45 ಈ ಕೆಳಗಿನ ಯಾವ ಮೆಮೊರಿ ಪ್ರಕಾರವು ನಾನ್-ವೊಲಟೈಲ್ ಆಗಿದೆ ಮತ್ತು ಸಾಮಾನ್ಯವಾಗಿ ಎಂಬೆಡೆಡ್ ಕಂಟ್ರೋಲರ್‌ಗಳಲ್ಲಿ ಫರ್ಮ್‌ವೇರ್ ಸ್ಟೋರೇಜ್‌ಗಾಗಿ ಬಳಸಲಾಗುತ್ತದೆ?

Ans
- ✗ 1. SRAM
- ✓ 2. ಫ್ಲ್ಯಾಶ್ ROM
- ✗ 3. L3 ಕ್ಯಾಶ್
- ✗ 4. DRAM

Get the Toppers Choice
BLACKBOOK VOCAB APP - Download Now

Q.46 ಒಂದು ವೇಳೆ A ಮತ್ತು B ಒಟ್ಟಿಗೆ ಸೇರಿ ಒಂದು ಕೆಲಸವನ್ನು 10 ದಿನಗಳಲ್ಲಿ ಮುಗಿಸಿದರೆ ಮತ್ತು B ಒಬ್ಬರೇ ಅದನ್ನು15 ದಿನಗಳಲ್ಲಿ ಮುಗಿಸಿದರೆ, A ಒಬ್ಬರೇ ಆ ಕೆಲಸವನ್ನು ಮುಗಿಸಲು ಎಷ್ಟು ದಿನಗಳನ್ನು ತೆಗೆದುಕೊಳ್ಳುತ್ತಾರೆ?

Ans
✗ 1. 20 ದಿನಗಳು
✗ 2. 25 ದಿನಗಳು
✓ 3. 30 ದಿನಗಳು
✗ 4. 15 ದಿನಗಳು

Q.47 ಈ ಕೆಳಗಿನ ಯಾವ ವೀಕ್ಷಣೆಯು, ರಾಸಾಯನಿಕ ಕ್ರಿಯೆ ನಡೆದಿದೆ ಎಂದು ಸೂಚಿಸುತ್ತದೆ?

Ans
✓ 1. ತಾಪಮಾನದಲ್ಲಿ ಬದಲಾವಣೆ
✗ 2. ಆಕಾರದಲ್ಲಿ ಬದಲಾವಣೆ
✗ 3. ಗಾತ್ರದಲ್ಲಿ ಬದಲಾವಣೆ
✗ 4. ರಚನಾವಿನ್ಯಾಸದಲ್ಲಿ ಯಾವುದೇ ಬದಲಾವಣೆಗಳಿಲ್ಲದಿರುವಿಕೆ

Q.48 I, J, K, L, R, S ಮತ್ತು T ಎಂಬ ಎಲ್ಲರೂ ಒಂದು ವೃತ್ತಾಕಾರದ ಮೇಜಿನ ಸುತ್ತಲೂ ಮೇಜಿನ ಮಧ್ಯಭಾಗಕ್ಕೆ ಮುಖಮಾಡಿ ಕುಳಿತಿದ್ದಾರೆ.
K ಅವರ ಬಲದಿಂದ ಎಣಿಸಿದಾಗ K ಮತ್ತು T ನಡುವೆ ಕೇವಲ ಎರಡು ಜನರು ಕುಳಿತಿದ್ದಾರೆ. L ಅವರ ಬಲಭಾಗದಿಂದ ಎಣಿಸಿದಾಗ S ಮತ್ತು L ನಡುವೆ ಕೇವಲ ಮೂರು ಜನರು ಕುಳಿತಿದ್ದಾರೆ. T ಅವರು L ಅವರ ತಕ್ಷಣದ ಬಲಭಾಗದಲ್ಲಿ ಕುಳಿತಿದ್ದಾರೆ. J ಅವರು R ಅವರ ತಕ್ಷಣದ ಬಲಭಾಗದಲ್ಲಿ ಕುಳಿತಿದ್ದಾರೆ.
ಹಾಗಾದರೆ I ಅವರ ಬಲಭಾಗದಲ್ಲಿ ನಾಲ್ಕನೇ ಸ್ಥಾನದಲ್ಲಿ ಯಾರು ಕುಳಿತಿದ್ದಾರೆ?

Ans
✓ 1. J
✗ 2. T
✗ 3. S
✗ 4. L

Q.49 ದೇವಾಲಯದ ಮಂಟಪವನ್ನು ಯಾವ ದೇವಾಲಯ ವಾಸ್ತುಶಿಲ್ಪ ಶಾಖೆಯಲ್ಲಿ 'ಜಗಮೋಹನ' ಎಂದು ಕರೆಯಲಾಗುತ್ತದೆ?

Ans
✗ 1. ಸೋಲಂಕಿ ಶಾಖೆ
✗ 2. ಖಜುರಾಹೋ ಶಾಖೆ
✓ 3. ಒಡಿಶಾ ಶಾಖೆ
✗ 4. ಪಾಲ ಶಾಖೆ

Q.50 ಲಿಂಗ ಸಮಾನತೆಯು ಮಾನವ ಅಭಿವೃದ್ಧಿಗೆ ಹೇಗೆ ಕೊಡುಗೆ ನೀಡುತ್ತದೆ?

Ans
✗ 1. ಕಾರ್ಯಪಡೆಯಲ್ಲಿನ ವೈವಿಧ್ಯತೆಯನ್ನು ಕಡಿಮೆ ಮಾಡುವ ಮೂಲಕ
✓ 2. ಶಿಕ್ಷಣ ಮತ್ತು ಕಾರ್ಯಪಡೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಗೆ ಇರುವ ಅಡೆತಡೆಗಳನ್ನು ತೆಗೆದುಹಾಕುವ ಮೂಲಕ
✗ 3. ಮಹಿಳೆಯರಿಗೆ ಅವಕಾಶಗಳನ್ನು ಸೀಮಿತಗೊಳಿಸುವ ಮೂಲಕ
✗ 4. ಪುರುಷ ಪ್ರಾಬಲ್ಯದ ಕೈಗಾರಿಕೆಗಳ ಮೇಲೆ ಮಾತ್ರ ಗಮನ ಹರಿಸುವ ಮೂಲಕ

Q.51 ಭಾರತ ಸರ್ಕಾರದ ಕೇಂದ್ರ ಸಚಿವರಾದ ರಾಜೀವ್ ರಂಜನ್ ಸಿಂಗ್ ಅವರು ಜನವರಿ 2025 ರಲ್ಲಿ ಸಿಕ್ಕಿಂನ _____ ಜಿಲ್ಲೆಯಲ್ಲಿ ಸಾವಯವ ಮೀನುಗಾರಿಕೆ ಕ್ಲಸ್ಟರ್ ಗೆ ಚಾಲನೆ ನೀಡಿದರು.

Ans
✗ 1. ಮಂಗನ್
✗ 2. ಪಾಕ್ಯಾಂಗ್
✓ 3. ಸೋರೆಂಗ್
✗ 4. ಗ್ಯಾಂಗ್ಟಾಕ್

Get the Toppers Choice
BLACKBOOK VOCAB APP - Download Now
GET IT ON Google Play

Q.52 Refer to the following number series and answer the question that follows (all numbers are single digit numbers only). Counting to be done from left to right only.

(Left) 9 8 7 4 5 3 2 4 5 6 8 1 2 3 5 6 7 6 5 3 9 (Right)

How many such even digits are there, each of the which is immediately preceded by a perfect square and immediately followed by an odd digit? (NOTE: 1 is also a perfect square)

Ans
✔ 1. Two
✘ 2. One
✘ 3. None
✘ 4. Three

Q.53 ಈ ಕೆಳಗೆ ನೀಡಿರುವ ಹೇಳಿಕೆಗಳು ಮತ್ತು ತೀರ್ಮಾನಗಳನ್ನು ಎಚ್ಚರಿಕೆಯಿಂದ ಓದಿ. ಹೇಳಿಕೆಗಳಲ್ಲಿ ನೀಡಲಾದ ಮಾಹಿತಿಯು, ನಾವು ಸಾಮಾನ್ಯವಾಗಿ ತಿಳಿದಿರುವ ಸಂಗತಿಗಳಿಗಿಂತ ಭಿನ್ನವಾಗಿ ಕಂಡುಬಂದರೂ ಸಹ, ನೀವು ಅವುಗಳನ್ನು ನಿಜವೆಂದು ಭಾವಿಸಿ, ಕೊಟ್ಟಿರುವ ಯಾವ ತೀರ್ಮಾನ/ಗಳು ಈ ಹೇಳಿಕೆಗಳನ್ನು ತಾರ್ಕಿಕವಾಗಿ ಅನುಸರಿಸುತ್ತದೆ/ವೆ ಎಂಬುದನ್ನು ನಿರ್ಧರಿಸಿ.

**ಹೇಳಿಕೆಗಳು:**
ಕೆಲವು ಬಲ್ಬ್‌ಗಳು ದೀಪಗಳು.
ಎಲ್ಲಾ ಬಲ್ಬ್‌ಗಳು ಆಯಸ್ಕಾಂತಗಳು.

**ತೀರ್ಮಾನಗಳು:**
(I) ಕನಿಷ್ಠ ಕೆಲವು ಆಯಸ್ಕಾಂತಗಳು ದೀಪಗಳು.
(II) ಕೆಲವು ಆಯಸ್ಕಾಂತಗಳು ಬಲ್ಬ್‌ಗಳು.

Ans
✘ 1. ತೀರ್ಮಾನ (I) ಮಾತ್ರ ಅನುಸರಿಸುತ್ತದೆ
✘ 2. ತೀರ್ಮಾನ (I) ಅಥವಾ (II) ಎರಡೂ ಅನುಸರಿಸುವುದಿಲ್ಲ
✔ 3. (I) ಮತ್ತು (II) ಎರಡೂ ತೀರ್ಮಾನಗಳು ಅನುಸರಿಸುತ್ತವೆ
✘ 4. ತೀರ್ಮಾನ (II) ಮಾತ್ರ ಅನುಸರಿಸುತ್ತದೆ

Q.54 ಈ ಕೆಳಗೆ ಕೊಟ್ಟಿರುವ ಸರಣಿಯಲ್ಲಿ ಪ್ರಶ್ನಾರ್ಥಕ ಚಿಹ್ನೆಯ ಜಾಗದಲ್ಲಿ (?) ಯಾವ ಸಂಖ್ಯೆ ಸರಿ ಹೊಂದುತ್ತದೆ?

16, 26, 39, 55, 74, ?

Ans
✘ 1. 100
✘ 2. 90
✔ 3. 96
✘ 4. 103

Q.55 ಬಾಲಿಮೇಲ ವಿದ್ಯುತ್ ಸ್ಥಾವರವು (Balimela Power Plant) ಭಾರತದ ಯಾವ ರಾಜ್ಯದಲ್ಲಿದೆ?

Ans
✔ 1. ಒಡಿಶಾ
✘ 2. ಆಂಧ್ರಪ್ರದೇಶ
✘ 3. ಜಾರ್ಖಂಡ್
✘ 4. ಛತ್ತೀಸ್‌ಗಢ

Q.56 Refer to the following number series and answer the question that follows (all numbers are single digit numbers only).

(Left) 8 8 4 7 5 5 3 2 9 8 6 4 5 3 8 4 5 8 9 1 5 7 4 9 7 5 1 (Right)

How many such even numbers are there, each of which is immediately preceded by an odd number and also immediately followed by an odd number?

Ans
✘ 1. 2
✔ 2. 3
✘ 3. 4
✘ 4. 0

Get the Toppers Choice
BLACKBOOK VOCAB APP - Download Now
GET IT ON Google Play

Q.57 ಕೊಟ್ಟಿರುವ {x + 4, 2x - 3, 5x, x + 1, 3x + 2} ದತ್ತಾಂಶ ಗಣದಲ್ಲಿ, x > 1 ಆಗಿದ್ದು, ಇಲ್ಲಿ x ಒಂದು ಸ್ವಾಭಾವಿಕ ಸಂಖ್ಯೆಯಾಗಿದೆ. ಒಂದು ವೇಳೆ ಮಧ್ಯಾಂಕವು 7 ಆಗಿದ್ದರೆ, x ನ ಮೌಲ್ಯ ಎಷ್ಟು?

Ans
✔ 1. 3
✘ 2. 4
✘ 3. 6
✘ 4. 2

Q.58 ರಾಧೆ ಅವರು A ಬಿಂದುವಿನಿಂದ ಚಾಲನೆ ಮಾಡಲು ಪ್ರಾರಂಭಿಸಿ ಪಶ್ಚಿಮಕ್ಕೆ 32 km ಚಲಿಸುತ್ತಾರೆ. ನಂತರ ಅವರು ಎಡಕ್ಕೆ ತಿರುಗಿ 30 km ಚಲಿಸುತ್ತಾರೆ, ನಂತರ ಎಡಕ್ಕೆ ತಿರುಗಿ 49 km ಚಲಿಸುತ್ತಾರೆ. ನಂತರ ಅವರು ಎಡಕ್ಕೆ ತಿರುಗಿ 46 km ಚಲಿಸುತ್ತಾರೆ. ಅವರು ಅಂತಿಮವಾಗಿ ಎಡಕ್ಕೆ ತಿರುಗಿ 17 km ಚಲಿಸುತ್ತಾರೆ ಮತ್ತು P ಬಿಂದುವಿನಲ್ಲಿ ನಿಲ್ಲುತ್ತಾರೆ. ಹಾಗಾದರೆ ಅವರು ಮತ್ತೆ A ಬಿಂದುವನ್ನು ತಲುಪಲು ಎಷ್ಟು ದೂರ (ಅತ್ಯಂತ ಕಡಿಮೆ ದೂರ) ಮತ್ತು ಯಾವ ದಿಕ್ಕಿನಲ್ಲಿ ಚಾಲನೆ ಮಾಡಬೇಕು? (ನಿರ್ದಿಷ್ಟವಾಗಿ ಹೇಳಿರುವುದನ್ನು ಬಿಟ್ಟು ಉಳಿದೆಲ್ಲಾ ತಿರುವುಗಳು ಕೇವಲ 90° ತಿರುವುಗಳಾಗಿವೆ)

Ans
✘ 1. 15 km ಪಶ್ಚಿಮಕ್ಕೆ
✘ 2. 12 km ಉತ್ತರಕ್ಕೆ
✘ 3. 13 km ದಕ್ಷಿಣಕ್ಕೆ
✔ 4. 16 km ದಕ್ಷಿಣಕ್ಕೆ

Q.59 7-ಅಂಕಿಯ ಸಂಖ್ಯೆ 40A861B ಅನ್ನು 3 ರಿಂದ ನಿಶ್ಶೇಷವಾಗಿ ಭಾಗಿಸಬಹುದು. ಹಾಗಾದರೆ (A + B) ಯ ಕನಿಷ್ಠ ಮೌಲ್ಯ ಎಷ್ಟು?

Ans
✔ 1. 2
✘ 2. 5
✘ 3. 1
✘ 4. 3

Q.60 ಗರಿಷ್ಠ 100 ಅಂಕಗಳನ್ನು ಹೊಂದಿರುವ ಒಂದು ಪರೀಕ್ಷೆಯಲ್ಲಿ B ಅವರು 54 ಅಂಕ ಮತ್ತು A ಅವರು 75 ಅಂಕಗಳನ್ನು ಗಳಿಸಿದ್ದಾರೆ. ಹಾಗಾದರೆ A ಯ ಅಂಕಗಳು B ಯ ಅಂಕಗಳ ಎಷ್ಟು ಶೇಕಡಾಕ್ಕೆ ಸಮ?

Ans
✘ 1. 72%
✘ 2. 75%
✘ 3. 101.07%
✔ 4. 138.89%

Q.61 ಎರಡು ಸಂಖ್ಯೆಗಳ ಮ.ಸಾ.ಅ. ಮತ್ತು ಲ.ಸಾ.ಅ. ಕ್ರಮವಾಗಿ 49 ಮತ್ತು 490 ಆಗಿವೆ. ಅವುಗಳಲ್ಲಿ ಒಂದು ಸಂಖ್ಯೆ 245 ಆಗಿದ್ದರೆ, ಇನ್ನೊಂದು ಸಂಖ್ಯೆಯನ್ನು ಕಂಡುಹಿಡಿಯಿರಿ.

Ans
✘ 1. 147
✘ 2. 49
✘ 3. 196
✔ 4. 98

Q.62 ಈ ಕೆಳಗೆ ಒಂದು ಪ್ರಶ್ನೆಯನ್ನು ನೀಡಲಾಗಿದ್ದು ಅದರ ನಂತರ (I) ಮತ್ತು (II) ಎಂಬ ಎರಡು ಹೇಳಿಕೆಗಳನ್ನು ನೀಡಲಾಗಿದೆ. ಈ ಹೇಳಿಕೆಗಳಲ್ಲಿರುವ ದತ್ತಾಂಶವು ಕೆಳಗಿನ ಪ್ರಶ್ನೆಗೆ ಉತ್ತರಿಸಲು ಸಾಕಾಗುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ನೀವು ನಿರ್ಧರಿಸಬೇಕು. ಈ ಎರಡೂ ಹೇಳಿಕೆಗಳನ್ನು ಓದಿರಿ ಮತ್ತು ಸೂಕ್ತವಾದ ಉತ್ತರ ಯಾವುದೆಂದು ನಿರ್ಧರಿಸಿ.

ಪ್ರಶ್ನೆ: M,A,N,C ಮತ್ತು G ಎಂಬ 5 ಕೋಲುಗಳಲ್ಲಿ, ಪ್ರತಿಯೊಂದೂ ಕೋಲು ಸಹ ಬೇರೆ ಬೇರೆ ಉದ್ದಗಳನ್ನು ಹೊಂದಿದ್ದು, ಯಾವ ಕೋಲು ಅತ್ಯಂತ ಉದ್ದವಾಗಿದೆ?

ಹೇಳಿಕೆಗಳು:
(I) M ಕೋಲು A ಕೋಲಿಗಿಂತ ಕಿರಿದಾಗಿದೆ ಆದರೆ N ಕೋಲಿಗಿಂತ ಉದ್ದವಾಗಿದೆ.
(II) N ಕೋಲು C ಕೋಲಿಗಿಂತ ಉದ್ದವಾಗಿದೆ ಆದರೆ G ಕೋಲಿಗಿಂತ ಕಿರಿದಾಗಿದೆ.

Ans
✘ 1. ಪ್ರಶ್ನೆಗೆ ಉತ್ತರಿಸಲು I ಮತ್ತು II ಎರಡೂ ಹೇಳಿಕೆಗಳು (ಹೇಳಿಕೆ I ಮಾತ್ರವೇ ಅಲ್ಲ ಅಥವಾ ಹೇಳಿಕೆ II ಮಾತ್ರವೇ ಅಲ್ಲ) ಸಾಕಾಗುತ್ತವೆ
✘ 2. ಪ್ರಶ್ನೆಗೆ ಉತ್ತರಿಸಲು ಹೇಳಿಕೆ I ರಲ್ಲಿನ ಮಾಹಿತಿಯೊಂದೇ ಸಾಕಾಗುತ್ತದೆ, ಮತ್ತು ಹೇಳಿಕೆ II ರಲ್ಲಿನ ಮಾಹಿತಿಯು ಸಾಕಾಗುವುದಿಲ್ಲ
✔ 3. ಪ್ರಶ್ನೆಗೆ ಉತ್ತರಿಸಲು ಹೇಳಿಕೆ I ಮತ್ತು II ಎರಡರಲ್ಲಿನ ಒಟ್ಟು ಮಾಹಿತಿಗಳು ಸಹ ಸಾಕಾಗುವುದಿಲ್ಲ
✘ 4. ಪ್ರಶ್ನೆಗೆ ಉತ್ತರಿಸಲು ಹೇಳಿಕೆ II ರಲ್ಲಿನ ಮಾಹಿತಿಯೊಂದೇ ಸಾಕಾಗುತ್ತದೆ, ಮತ್ತು ಹೇಳಿಕೆ I ರಲ್ಲಿನ ಮಾಹಿತಿಯು ಸಾಕಾಗುವುದಿಲ್ಲ

Get the Toppers Choice
BLACKBOOK VOCAB APP - Download Now
GET IT ON Google Play

**Q.63** ಇಂಗ್ಲಿಷ್ ವರ್ಣಮಾಲೆಯ ಕ್ರಮದ ಆಧಾರದ ಮೇಲೆ ನೀಡಿರುವ ಕೆಳಗಿನ ಸರಣಿಯಲ್ಲಿನ ಪ್ರಶ್ನಾರ್ಥಕ ಚಿಹ್ನೆಯ (?) ಸ್ಥಳದಲ್ಲಿ ಏನು ಬರಬೇಕು?

EDG, CBE, AZC, YXA, WVY, ?

**Ans**
- ✗ 1. USW
- ✗ 2. VSW
- ✗ 3. VTU
- ✓ 4. UTW

**Q.64** A conical cap has the base diameter 40 cm and height 21 cm. What is at the rate of 112 paise per sq. cm? $\left(\text{Use } \pi = \frac{22}{7}\right)$

**Ans**
- ✗ 1. ₹2,051.7
- ✗ 2. ₹2,087.4
- ✓ 3. ₹2,041.6
- ✗ 4. ₹2,131.3

**Q.65** ಬೊಕಾರೊ ಉಕ್ಕು ಸ್ಥಾವರವು ಈ ಕೆಳಗಿನ ಯಾವ ರಾಜ್ಯದಲ್ಲಿದೆ?

**Ans**
- ✓ 1. ಜಾರ್ಖಂಡ್
- ✗ 2. ಛತ್ತೀಸ್‌ಗಢ
- ✗ 3. ಬಿಹಾರ
- ✗ 4. ಪಶ್ಚಿಮ ಬಂಗಾಳ

**Q.66** ಕೆಳಗೆ ನೀಡಲಾದ ಎರಡು ತ್ರಿವಳಿಗಳು ಯಾವ ಮಾದರಿಯನ್ನು ಅನುಸರಿಸುತ್ತವೆಯೋ ಅದೇ ಮಾದರಿಯನ್ನು ಅನುಸರಿಸುವ ತ್ರಿವಳಿಯನ್ನು ಆಯ್ಕೆಮಾಡಿ. ಎರಡೂ ತ್ರಿವಳಿಗಳು ಒಂದೇ ಮಾದರಿಯನ್ನು ಅನುಸರಿಸುತ್ತವೆ.

BATH – HBAT – THBA
TOYS – STOY – YSTO

**Ans**
- ✗ 1. LOVE – OVEL – VELO
- ✗ 2. TOMB – OMTB – MTOB
- ✓ 3. ABLE – EABL – LEAB
- ✗ 4. CART – ACTR – CTAR

**Q.67** In a certain code language,
A + B means 'A is the father of B',
A – B means 'A is the wife of B',
A × B means 'A is the son of B',
and A ÷ B means 'A is the daughter of B'.

How is X related to W if 'W × Z + Y ÷ X – Z'?

**Ans**
- ✗ 1. Wife's mother
- ✓ 2. Mother
- ✗ 3. Son's wife
- ✗ 4. Daughter's husband

**Q.68** ಮೇ 2025 ರ ಮಾಹಿತಿಯಂತೆ ಭಾರತದ ಅತ್ಯಂತ ದೊಡ್ಡ ಸಂರಕ್ಷಣಾ ಮೀಸಲು ಪ್ರದೇಶವಾದ ತ್ಸರಪ್ ಚು ಸಂರಕ್ಷಣಾ ಮೀಸಲು ಪ್ರದೇಶವು (Tsarap Chu Conservation Reserve) ಈ ಕೆಳಗಿನ ಯಾವ ರಾಜ್ಯದಲ್ಲಿದೆ?

**Ans**
- ✗ 1. ಅಸ್ಸಾಂ
- ✓ 2. ಹಿಮಾಚಲ ಪ್ರದೇಶ
- ✗ 3. ಅರುಣಾಚಲ ಪ್ರದೇಶ
- ✗ 4. ಆಂಧ್ರ ಪ್ರದೇಶ

Blackbook

Get the Toppers Choice
BLACKBOOK VOCAB APP - Download Now
GET IT ON Google Play

Q.69 ಪರಿಶುದ್ಧವಾದ ಖಾದಿ ಬಟ್ಟೆಯಿಂದ ತ್ರಿವರ್ಣ ಧ್ವಜವನ್ನು ತಯಾರಿಸಲು ಕಾನೂನುಸಮ್ಮತವಾಗಿ ಅನುಮತಿ ಪಡೆದ ಏಕೈಕ ಘಟಕವಾದ 'ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಸಂಯುಕ್ತ ಸಂಘ'ವು (KKGSS) ಯಾವ ಸ್ಥಳದಲ್ಲಿದೆ?

Ans
✔ 1. ಬೆಂಗೇರಿ
✘ 2. ಬಾದಾಮಿ
✘ 3. ಗೋಕರ್ಣ
✘ 4. ಬೇಲೂರು

Q.70 ಭಾರತೀಯ ಸಂವಿಧಾನದ ಯಾವ ಅನುಸೂಚಿಯು ಪಂಚಾಯತ್‌ಗಳ ಅಧಿಕಾರಗಳು, ಪ್ರಾಧಿಕಾರ ಮತ್ತು ಜವಾಬ್ದಾರಿಗಳ ಪಟ್ಟಿಯನ್ನು ಹೊಂದಿದೆ?

Ans
✘ 1. ಹನ್ನೆರಡನೇ ಅನುಸೂಚಿ
✘ 2. ಒಂಬತ್ತನೇ ಅನುಸೂಚಿ
✘ 3. ಹತ್ತನೇ ಅನುಸೂಚಿ
✔ 4. ಹನ್ನೊಂದನೇ ಅನುಸೂಚಿ

Q.71 ಎರಡು ಪರಿಪೂರಕ ಕೋನಗಳಲ್ಲಿ (supplementary angles) ದೊಡ್ಡ ಕೋನವು ಸಣ್ಣ ಕೋನಕ್ಕಿಂತ 16° ಹೆಚ್ಚು ಇದೆ. ಹಾಗಾದರೆ ಸಣ್ಣ ಕೋನವು (ಡಿಗ್ರಿಗಳಲ್ಲಿ) _____ ಆಗಿದೆ.

Ans
✘ 1. 72
✘ 2. 79
✘ 3. 87
✔ 4. 82

Q.72 ಈ ಕೆಳಗಿನ ಯಾವ ನಿಯಮವು, 'ಅದರ ಮೇಲೆ ಬಾಹ್ಯ ಬಲವು ವರ್ತಿಸದ ಹೊರತು ಪ್ರತಿಯೊಂದು ವಸ್ತುವು ನಿಶ್ಚಲ ಸ್ಥಿತಿಯಲ್ಲಿರುತ್ತದೆ ಅಥವಾ ಏಕರೂಪದ ಚಲನೆಯಲ್ಲಿರುತ್ತದೆ' ಎಂದು ಹೇಳುತ್ತದೆ?

Ans
✘ 1. ನ್ಯೂಟನ್‌ನ ಚಲನೆಯ ಮೂರನೇ ನಿಯಮ
✘ 2. ಸಂವೇಗದ ಸಂರಕ್ಷಣೆಯ ನಿಯಮ
✘ 3. ಕೆಪ್ಲರ್‌ನ ಗ್ರಹಗಳ ಚಲನೆಯ ನಿಯಮಗಳು
✔ 4. ನ್ಯೂಟನ್‌ನ ಚಲನೆಯ ಮೊದಲ ನಿಯಮ

Q.73 ಎರಡು ಕೊಳವೆಗಳು ಒಂದು ತೊಟ್ಟಿಯನ್ನು ಕ್ರಮವಾಗಿ 99 ನಿಮಿಷ ಮತ್ತು 90 ನಿಮಿಷಗಳಲ್ಲಿ ತುಂಬಿಸಬಹುದು. ತೊಟ್ಟಿಯನ್ನು ಖಾಲಿ ಮಾಡಲು ಅದರ ಕೆಳಭಾಗದಲ್ಲಿ ಒಂದು ಕೊಳವೆ ಇದೆ. ಒಂದುವೇಳೆ ಎಲ್ಲಾ ಮೂರು ಕೊಳವೆಗಳನ್ನು ಏಕಕಾಲದಲ್ಲಿ ತೆರೆದರೆ, ಆ ಖಾಲಿ ತೊಟ್ಟಿಯು 50 ನಿಮಿಷಗಳಲ್ಲಿ ತುಂಬುತ್ತದೆ. ಒಂದು ವೇಳೆ ಬೇರೆ ಯಾವುದೇ ಕೊಳವೆಯನ್ನು ತೆರೆಯದಿದ್ದರೆ, ತೊಟ್ಟಿಯ ಕೆಳಭಾಗದಲ್ಲಿರುವ ಕೊಳವೆಯು ಸಂಪೂರ್ಣವಾಗಿ ತುಂಬಿದ ತೊಟ್ಟಿಯನ್ನು ಖಾಲಿ ಮಾಡಲು ಎಷ್ಟು ಸಮಯ ತೆಗೆದುಕೊಳ್ಳುತ್ತದೆ?

Ans
✔ 1. 825 ನಿಮಿಷಗಳು
✘ 2. 815 ನಿಮಿಷಗಳು
✘ 3. 822 ನಿಮಿಷಗಳು
✘ 4. 841 ನಿಮಿಷಗಳು

Q.74 A ಮತ್ತು B ಅವರು ಒಂದು ಕೆಲಸವನ್ನು 14 ದಿನಗಳಲ್ಲಿ ಪೂರ್ಣಗೊಳಿಸುತ್ತಾರೆ. ಒಂದು ವೇಳೆ A ಒಬ್ಬರೇ ಆ ಕೆಲಸವನ್ನು 42 ದಿನಗಳಲ್ಲಿ ಪೂರ್ಣಗೊಳಿಸಿದರೆ, B ಒಬ್ಬರೇ ಅದೇ ಕೆಲಸದ ಮೂರನೇ-ಒಂದು ಭಾಗದಷ್ಟು ಕೆಲಸವನ್ನು _______ ದಿನಗಳಲ್ಲಿ ಪೂರ್ಣಗೊಳಿಸಬಹುದು.

Ans
✘ 1. 21
✔ 2. 7
✘ 3. 14
✘ 4. 28

Get the Toppers Choice
BLACKBOOK VOCAB APP - Download Now
GET IT ON Google Play

**Q.75** In the conduct of elections in India, which authority is responsible for supervising all polling stations within a constituency and officially declaring the final election result?

Ans
1. Presiding Officer ✗
2. Chief Electoral Observer ✗
3. Polling Officer ✗
4. Returning Officer ✓

**Q.76** ಒಂದು ಐಪ್ಯಾಡ್‌ನ ನಮೂದಿತ ಬೆಲೆಯು ₹960 ಆಗಿದೆ. ಅದನ್ನು ತಲಾ 25% ರಂತೆ ಎರಡು ಅನುಕ್ರಮ ರಿಯಾಯಿತಿಗಳನ್ನು ನೀಡಿ ಮಾರಾಟ ಮಾಡಲಾಗುತ್ತದೆ. ನಂತರ ನಗದು ಪಾವತಿಗಾಗಿ ಹೆಚ್ಚುವರಿಯಾಗಿ 15% ರಿಯಾಯಿತಿ ನೀಡಲಾಗುತ್ತದೆ. ಹಾಗಾದರೆ ನಗದು ರಿಯಾಯಿತಿಯ ನಂತರದ ಅಂತಿಮ ಮಾರಾಟ ಬೆಲೆ (₹ ಗಳಲ್ಲಿ) ಎಷ್ಟು?

Ans
1. 456 ✗
2. 461 ✗
3. 460 ✗
4. 459 ✓

**Q.77** 2025ರ ಫೆಬ್ರವರಿಯಲ್ಲಿ ಭಾರತದ ಅಂದಿನ ಗೌರವಾನ್ವಿತ ಉಪರಾಷ್ಟ್ರಪತಿ ಶ್ರೀ ಜಗದೀಪ್ ಧನ್ಕರ್ ಅವರು ಬಿಡುಗಡೆ ಮಾಡಿದ 'I AM?' ಪುಸ್ತಕದ ಸಂಕಲನಕಾರ ಯಾರು?

Ans
1. ನಮಿತಾ ಗೋಖಲೆ ✗
2. ಅರುಣ್ ಶೌರಿ ✗
3. ಗೋಪಿಚಂದ್ ಪಿ. ಹಿಂದೂಜಾ ✓
4. ಪಿಎಸ್ ರಾಮನ್ ✗

**Q.78** ಒಂದು ವೇಳೆ '+' ಮತ್ತು '−' ಗಳನ್ನು ಪರಸ್ಪರ ಅದಲು ಬದಲು ಮಾಡಿದರೆ ಮತ್ತು '×' ಮತ್ತು '÷' ಗಳನ್ನು ಪರಸ್ಪರ ಅದಲು ಬದಲು ಮಾಡಿದರೆ, ಈ ಕೆಳಗಿನ ಸಮೀಕರಣದಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಯಾವ ಸಂಖ್ಯೆ ಬರುತ್ತದೆ?

692 − 438 ÷ 1488 × 372 + 257 ÷ 621 × 69 = ?

Ans
1. 313 ✗
2. 113 ✗
3. 131 ✓
4. 311 ✗

**Q.79** ಒಂದು ದೋಣಿಯು ಪ್ರವಾಹದ ದಿಕ್ಕಿನಲ್ಲಿ ಚಲಿಸುವ ವೇಗ 115 km/ hr ಆಗಿದೆ ಮತ್ತು ಪ್ರವಾಹದ ವಿರುದ್ಧ ದಿಕ್ಕಿನಲ್ಲಿ ಚಲಿಸುವ ವೇಗ 23 km/ hr ಆಗಿದೆ. ಈ ದೋಣಿಯು ಒಂದು ಸ್ಥಳಕ್ಕೆ ಹೋಗಲು ಮತ್ತು ಮರಳಿ ಬರಲು ಒಟ್ಟು 25 ಗಂಟೆಗಳನ್ನು ತೆಗೆದುಕೊಳ್ಳುತ್ತದೆ. ಹಾಗಾದರೆ ದೋಣಿಯು ಪ್ರಯಾಣಿಸಿದ ಒಟ್ಟು ದೂರ ಎಷ್ಟು?

Ans
1. $958\frac{2}{3}$ km ✗
2. $958\frac{1}{3}$ km ✓
3. $479\frac{5}{6}$ km ✗
4. $479\frac{1}{6}$ km ✗

**Q.80** ಸಂಸ್ಕೃತಿ ಸಚಿವಾಲಯದ ಪ್ರಕಾರ, ಒಂದು ಭಾಷೆಯನ್ನು ಶಾಸ್ತ್ರೀಯವೆಂದು ಘೋಷಿಸುವುದರ ಪರಿಣಾಮವೇನು?

Ans
1. ಹೆಚ್ಚಿದ ಸಾಕ್ಷರತೆಯ ಪ್ರಮಾಣ ✗
2. ರಾಷ್ಟ್ರೀಯ ಏಕೀಕರಣ ✗
3. ಜಾಗತಿಕ ಸಹಭಾಗಿತ್ವಗಳು ✗
4. ಉದ್ಯೋಗಾವಕಾಶಗಳು ✓

Blackbook

Get the Toppers Choice
BLACKBOOK VOCAB APP - Download Now
GET IT ON Google Play

Q.81 The area of a square field is 1369 $m^2$. Its perimeter (in m) is:

Ans ✔ 1. 148
✘ 2. 139
✘ 3. 152
✘ 4. 146

Q.82 ಭಾರತದಲ್ಲಿ ಈ ಕೆಳಗಿನ ಯಾವ ಭಾಷೆಯನ್ನು ಮಾತನಾಡುವವರು ಹೆಚ್ಚಾಗಿ ಅಂತರರಾಷ್ಟ್ರೀಯ ಗಡಿಗಳಿಗೆ ಹೊಂದಿಕೊಂಡಿರುವ ಹಿಮಾಲಯ ಪಟ್ಟಿಗೆ ಸೀಮಿತರಾಗಿದ್ದಾರೆ?

Ans ✘ 1. ದ್ರಾವಿಡ
✘ 2. ಇಂಡೋ-ಆರ್ಯನ್
✔ 3. ಟಿಬೆಟೊ-ಬರ್ಮನ್
✘ 4. ಆಸ್ಟ್ರಿಕ್

Q.83 2025 ರಲ್ಲಿ 'ವರ್ಲ್ಡ್ ಅಥ್ಲೀಟ್ ಆಫ್ ದ ಇಯರ್' ಪ್ರಶಸ್ತಿಯನ್ನು ಈ ಕೆಳಗಿನ ಯಾವ ಪುರುಷ ಅಥ್ಲೀಟ್ ಪಡೆದುಕೊಂಡರು?

Ans ✘ 1. ನೋವಾ ಲೈಲ್ಸ್
✘ 2. ಯಾಕೋಬ್ ಇನ್ಗೆಬ್ರಿಗ್ಸೆನ್ (Jakob Ingebrigtsen)
✘ 3. ನೀರಜ್ ಚೋಪ್ರಾ
✔ 4. ಮೊಂಡೋ ಡುಪ್ಲಾಂಟಿಸ್ (Mondo Duplantis)

Q.84 ಅಮರಾವತಿ, ಭವಾನಿ, ಹೇಮಾವತಿ ಮತ್ತು ಕಬಿನಿ, ಇವು ಯಾವ ನದಿಯ ಪ್ರಮುಖ ಉಪನದಿಗಳಾಗಿವೆ?

Ans ✘ 1. ತಪತಿ
✘ 2. ಬ್ರಹ್ಮಪುತ್ರ
✘ 3. ಸಿಂಧೂ
✔ 4. ಕಾವೇರಿ

Q.85 ______ ವರೆಗಿನ ನೈಋತ್ಯ ಮಾನ್ಸೂನ್ ಅವಧಿಯನ್ನು ದೇಶದ ಬಹುತೇಕ ಭಾಗಗಳಲ್ಲಿ ಮಳೆಗಾಲ ಎಂದು ಕರೆಯಲಾಗುತ್ತದೆ.

Ans ✔ 1. ಜೂನ್ ತಿಂಗಳಿಂದ ಸೆಪ್ಟೆಂಬರ್ ತಿಂಗಳ
✘ 2. ಜೂನ್ ತಿಂಗಳಿಂದ ಅಕ್ಟೋಬರ್ ತಿಂಗಳ
✘ 3. ಜೂನ್ ತಿಂಗಳಿಂದ ಆಗಸ್ಟ್ ತಿಂಗಳ
✘ 4. ಮೇ ತಿಂಗಳಿಂದ ಆಗಸ್ಟ್ ತಿಂಗಳ

Q.86 ಅತುಲ್ ಅವರು ಪ್ರತಿ ತಿಂಗಳಿಗೆ ₹16,000 ಸಂಪಾದಿಸುತ್ತಾರೆ. ಅವರು ಬಾಡಿಗೆಗೆ ₹5,500 ಹಾಗೂ ಬಿಲ್‌ಗಳಿಗೆ ₹2,500 ಖರ್ಚು ಮಾಡುತ್ತಾರೆ ಹಾಗೂ ಉಳಿದ ಮೊತ್ತವನ್ನು ಪ್ರತಿ ತಿಂಗಳು ಉಳಿತಾಯ ಮಾಡುತ್ತಾರೆ. ಒಂದು ವೇಳೆ ಅವರು ತನ್ನ ಒಂದು ತಿಂಗಳ ಸಂಪೂರ್ಣ ಉಳಿತಾಯವನ್ನು ತನ್ನ ಹುಟ್ಟುಹಬ್ಬದ ಆಚರಣೆಗೆ ಬಳಸಿದರೆ, ಅವರ ವರ್ಷದ ಒಟ್ಟು ಉಳಿತಾಯವನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

Ans ✔ 1. 88,000
✘ 2. 72,000
✘ 3. 96,000
✘ 4. 80,000

Generated by rank.qmaths.in

Get the Toppers Choice
BLACKBOOK VOCAB APP - Download Now
GET IT ON Google Play

Q.87 ನಿತಿನ್ ಅವರು Y ಬಿಂದುವಿನಿಂದ ಚಾಲನೆ ಮಾಡಲು ಆರಂಭಿಸಿ ದಕ್ಷಿಣದ ಕಡೆಗೆ 13 km ಸಾಗುತ್ತಾರೆ. ನಂತರ ಅವರು ಬಲ ತಿರುವು ತೆಗೆದುಕೊಂಡು 59 km ದೂರ ಚಲಾಯಿಸುತ್ತಾರೆ. ಮತ್ತೆ ಎಡ ತಿರುವು ತೆಗೆದುಕೊಂಡು 49 km ದೂರ ಚಲಾಯಿಸುತ್ತಾರೆ. ಅವರು ಮತ್ತೆ ಎಡ ತಿರುವು ತೆಗೆದುಕೊಂಡು 21 km ದೂರ ಚಲಾಯಿಸುತ್ತಾರೆ. ಎಡ ತಿರುವು ತೆಗೆದುಕೊಂಡು 37 km ದೂರ ಚಲಾಯಿಸುತ್ತಾರೆ. ಅವರು ಮತ್ತೆ ಬಲ ತಿರುವು ತೆಗೆದುಕೊಂಡು 38 km ದೂರ ಚಲಾಯಿಸುತ್ತಾರೆ. ಬಲ ತಿರುವು ತೆಗೆದುಕೊಂಡು 23 km ದೂರ ಸಾಗಿ Z ಬಿಂದುವಿನಲ್ಲಿ ನಿಲ್ಲುತ್ತಾರೆ. ಹಾಗಾದರೆ ಅವರು Y ಬಿಂದುವನ್ನು ಮತ್ತೆ ಮರಳಿ ತಲುಪಲು ಎಷ್ಟು ದೂರ (ಅತ್ಯಂತ ಕಡಿಮೆ ದೂರ) ಮತ್ತು ಯಾವ ದಿಕ್ಕಿನಲ್ಲಿ ಚಾಲನೆ ಮಾಡಬೇಕು? (ನಿರ್ದಿಷ್ಟವಾಗಿ ಸೂಚಿಸಿದ ಹೊರತು ಎಲ್ಲಾ ತಿರುವುಗಳು 90° ತಿರುವುಗಳಾಗಿವೆ.)

Ans
✔ 1. 48 km ಉತ್ತರದ ಕಡೆಗೆ
✘ 2. 51 km ದಕ್ಷಿಣದ ಕಡೆಗೆ
✘ 3. 43 km ಉತ್ತರದ ಕಡೆಗೆ
✘ 4. 49 km ದಕ್ಷಿಣದ ಕಡೆಗೆ

Q.88 The Constitutional provisions enabling the establishment of tribunals in India were introduced through which Amendment Act?

Ans
✘ 1. Forty-fourth Amendment Act, 1978
✔ 2. Forty-second Amendment Act, 1976
✘ 3. Fifty-second Amendment Act, 1985
✘ 4. Forty-first Amendment Act, 1975

Q.89 ಸರಳೀಕರಿಸಿ: $x(5x - 5) + 7(x^2 - 2) + 15$

Ans
✔ 1. 12x2 – 5x + 1
✘ 2. −12x2 – 5x + 1
✘ 3. 12x2 – 5x – 1
✘ 4. −12x2 – 5x – 1

Q.90 ಒಂದು ರೈಲು ಕ್ರಮವಾಗಿ 45 km/hr, 60 km/hr ಮತ್ತು 90 km/hr ವೇಗದಲ್ಲಿ ತಲಾ 180 km ಗಳ ಮೂರು ಸಮಾನ ದೂರಗಳನ್ನು ಕ್ರಮಿಸುತ್ತದೆ. ಹಾಗಾದರೆ ಎಲ್ಲಾ ಮೂರು ದೂರಗಳನ್ನು ಕ್ರಮಿಸಲು ತೆಗೆದುಕೊಳ್ಳುವ ಒಟ್ಟು ಸಮಯ ಎಷ್ಟು?

Ans
✘ 1. 3.5 ಗಂಟೆಗಳು
✔ 2. 9 ಗಂಟೆಗಳು
✘ 3. 4.5 ಗಂಟೆಗಳು
✘ 4. 7 ಗಂಟೆಗಳು

Q.91 ಭಾರತೀಯ ಸಂವಿಧಾನದ ಈ ಕೆಳಗಿನ ಯಾವ ಅನುಚ್ಛೇದಗಳು ರಾಜ್ಯ ನೀತಿಗಳ ನಿರ್ದೇಶಕ ತತ್ವಗಳಿಗೆ ಸಂಬಂಧಿಸಿವೆ?

Ans
✔ 1. ಅನುಚ್ಛೇದಗಳು 36 ರಿಂದ 51
✘ 2. ಅನುಚ್ಛೇದಗಳು 56 ರಿಂದ 51
✘ 3. ಅನುಚ್ಛೇದಗಳು 66 ರಿಂದ 51
✘ 4. ಅನುಚ್ಛೇದಗಳು 46 ರಿಂದ 51

Q.92 ಆಹಾರ ಉತ್ಪನ್ನಗಳನ್ನು ತಯಾರಿಸಲು ಬಳಸುವ, ಮಾನವನ ಬಳಕೆಗೆ ಸುರಕ್ಷಿತವಲ್ಲದ ಪದಾರ್ಥಗಳನ್ನು ____ ಎಂದು ಕರೆಯಲಾಗುತ್ತದೆ.

Ans
✘ 1. ಸುವಾಸನೆಕಾರಕಗಳು
✘ 2. ರಾಸಾಯನಿಕ ಹಾನಿಕಾರಕಗಳು
✘ 3. ಆಹಾರ ಸಂಯೋಜನೀಯಗಳು
✔ 4. ಕಲಬೆರಕೆ ಪದಾರ್ಥಗಳು

Q.93 ತಮ್ಮ ವೃತ್ತಿಗೆ ಸಂಬಂಧಿಸಿದಂತೆ, ಪೂರ್ವ ವೈದಿಕ ಕಾಲದ ಆರ್ಯರು ____ ಆಗಿದ್ದರು.

Ans
✔ 1. ಪಶುಪಾಲಕರು
✘ 2. ವರ್ತಕರು ಮತ್ತು ವ್ಯಾಪಾರಿಗಳು
✘ 3. ಮೀನುಗಾರರು ಮತ್ತು ಬೇಟೆಗಾರರು
✘ 4. ಪುರೋಹಿತರು

Blackbook

Get the Toppers Choice
BLACKBOOK VOCAB APP - Download Now
GET IT ON Google Play

Q.94 H, I, J, K, Q, R ಮತ್ತು S ಎಂಬ ಏಳು ಪೆಟ್ಟಿಗೆಗಳನ್ನು ಒಂದರ ಮೇಲೊಂದರಂತೆ ಇಡಲಾಗಿದೆ. ಆದರೆ ಅವೆಲ್ಲವೂ ಅದೇ ಕ್ರಮದಲ್ಲಿಯೇ ಇರಬೇಕಾಗಿಲ್ಲ. H ಅನ್ನು ಕೆಳಗಿನಿಂದ ಎರಡನೇ ಸ್ಥಾನದಲ್ಲಿ ಇಡಲಾಗಿದೆ. ಕೇವಲ ಮೂರು ಪೆಟ್ಟಿಗೆಗಳನ್ನು H ಮತ್ತು S ನಡುವೆ ಇಡಲಾಗಿದೆ. J ಅನ್ನು H ನ ಕೆಳಗಿನ ಸ್ಥಾನವೊಂದರಲ್ಲಿ ಇಡಲಾಗಿದೆ. Q ಅನ್ನು ಮಾತ್ರ S ಮತ್ತು R ನಡುವೆ ಇಡಲಾಗಿದೆ. K ಅನ್ನು S ಗಿಂತ ಮೇಲಿರುವ ಸ್ಥಾನವೊಂದರಲ್ಲಿ ಇಡಲಾಗಿದೆ. ಹಾಗಾದರೆ I ಮತ್ತು J ನಡುವೆ ಎಷ್ಟು ಪೆಟ್ಟಿಗೆಗಳನ್ನು ಇಡಲಾಗಿದೆ?

Ans
- ✗ 1. ನಾಲ್ಕು
- ✓ 2. ಒಂದು
- ✗ 3. ಮೂರು
- ✗ 4. ಎರಡು

Q.95 U, V, W, X, E, F ಮತ್ತು G ಎಂಬ ಏಳು ಪೆಟ್ಟಿಗೆಗಳನ್ನು ಒಂದರ ಮೇಲೊಂದರಂತೆ ಇಡಲಾಗಿದೆ. ಆದರೆ ಅವು ಅದೇ ಕ್ರಮದಲ್ಲಿ ಇರಬೇಕಾಗಿಲ್ಲ.
ಕೇವಲ ಎರಡು ಪೆಟ್ಟಿಗೆಗಳನ್ನು G ಯ ಕೆಳಗೆ ಇಡಲಾಗಿದೆ. ಕೇವಲ ಒಂದು ಪೆಟ್ಟಿಗೆಯನ್ನು V ಯ ಮೇಲೆ ಇಡಲಾಗಿದೆ. V ಮತ್ತು U ನಡುವೆ ಕೇವಲ ಒಂದು ಪೆಟ್ಟಿಗೆಯನ್ನು ಇಡಲಾಗಿದೆ. X ಅನ್ನು P ಯ ತಕ್ಷಣದ ಮೇಲೆ ಇಡಲಾಗಿದೆ. W ಅನ್ನು E ಯ ಕೆಳಗಿನ ಯಾವುದಾದರೊಂದು ಸ್ಥಾನದಲ್ಲಿ ಇಡಲಾಗಿದೆ. ಹಾಗಾದರೆ E ಮತ್ತು X ನಡುವೆ ಎಷ್ಟು ಪೆಟ್ಟಿಗೆಗಳನ್ನು ಇಡಲಾಗಿದೆ?

Ans
- ✓ 1. ಎರಡು
- ✗ 2. ನಾಲ್ಕು
- ✗ 3. ಒಂದು
- ✗ 4. ಮೂರು

Q.96 ಲೋಕ ಅದಾಲತ್‌ಗಳು ಯಾವ ರೀತಿಯ ನಿರ್ಣಯವನ್ನು ನೀಡುವ ಮೂಲಕ ವಿವಾದಗಳನ್ನು ಸೌಹಾರ್ದಯುತವಾಗಿ ಇತ್ಯರ್ಥಪಡಿಸುವ ಗುರಿಯನ್ನು ಹೊಂದಿವೆ?

Ans
- ✗ 1. ಆಜ್ಞಾಪಕ ಆದೇಶಗಳು
- ✗ 2. ವಿವಾದಗಳ ಮೂಲಕ
- ✓ 3. ಪರಸ್ಪರ ಸಮ್ಮತಿಯ/ರಾಜಿ
- ✗ 4. ಕ್ರಿಮಿನಲ್

Q.97 ಇಂದಿನಿಂದ ಮೂರು ವರ್ಷಗಳ ಹಿಂದೆ ಅಮನ್ ಅವರಿಗೆ ಚಮನ್ ಅವರ ನಾಲ್ಕು ಪಟ್ಟು ವಯಸ್ಸಾಗಿತ್ತು. ಇಂದಿನಿಂದ ಮೂರು ವರ್ಷಗಳ ನಂತರ ಅವರಿಗೆ ಚಮನ್ ಅವರ ಎರಡು ಪಟ್ಟು ವಯಸ್ಸು ಆಗುತ್ತದೆ. ಹಾಗಾದರೆ ಅಮನ್ ಅವರ ಪ್ರಸ್ತುತ ವಯಸ್ಸು (ವರ್ಷಗಳಲ್ಲಿ) ಎಷ್ಟು?

Ans
- ✗ 1. 18
- ✓ 2. 15
- ✗ 3. 10
- ✗ 4. 20

Q.98 ಒಂದುವೇಳೆ ‘A’ ಎಂದರೆ ‘÷’, ‘B’ ಎಂದರೆ ‘×’, ‘C’ ಎಂದರೆ ‘+’ ಮತ್ತು ‘D’ ಎಂದರೆ ‘−’ ಆಗಿದ್ದರೆ, ಈ ಕೆಳಗಿನ ಸಮೀಕರಣದಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಏನು ಬರುತ್ತದೆ?

138 B 2 C 24 A 4 D 8 = ?

Ans
- ✗ 1. 273
- ✗ 2. 272
- ✗ 3. 271
- ✓ 4. 274

Q.99 ಕಂಪ್ಯೂಟರ್ ಪರಿಭಾಷೆಯಲ್ಲಿ 'ASCII' ಎಂಬ ಸಂಕ್ಷಿಪ್ತ ರೂಪವು ಏನನ್ನು ಸೂಚಿಸುತ್ತದೆ?

Ans
- ✗ 1. ಅಡ್ವಾನ್ಸ್ಡ್ ಸ್ಟ್ಯಾಂಡರ್ಡ್ ಕೋಡ್ ಫಾರ್ ಇನ್ಫರ್ಮೇಷನ್ ಇಂಟರ್ಚೇಂಜ್ (Advanced Standard Code for Information Interchange)
- ✗ 2. ಅಮೆರಿಕನ್ ಸೈಂಟಿಫಿಕ್ ಕೋಡ್ ಫಾರ್ ಇನ್ಫರ್ಮೇಷನ್ ಇಂಟರ್ಚೇಂಜ್ (American Scientific Code for Information Interchange)
- ✓ 3. ಅಮೆರಿಕನ್ ಸ್ಟ್ಯಾಂಡರ್ಡ್ ಕೋಡ್ ಫಾರ್ ಇನ್ಫರ್ಮೇಷನ್ ಇಂಟರ್ಚೇಂಜ್ (American Standard Code for Information Interchange)
- ✗ 4. ಅಮೆರಿಕನ್ ಸ್ಟ್ಯಾಂಡರ್ಡ್ ಕೋಡ್ ಫಾರ್ ಇಂಟರ್ನ್ಯಾಷನಲ್ ಇಂಟರ್ಚೇಂಜ್ (American Standard Code for International Interchange)

Generated by rank.qmaths.in

Get the Toppers Choice
BLACKBOOK VOCAB APP - Download Now
GET IT ON Google Play

Q.100 What is the term used for alternative forms of a gene?

Ans
1. Locus
2. Chromosome
3. Genome
4. Allele ✔

Q.101 ಈ ಕೆಳಗಿನವರಲ್ಲಿ ಯಾರು ಮಾರ್ಚ್ 1930 ರಲ್ಲಿ ದಂಡಿ ಯಾತ್ರೆಯನ್ನು (Dandi March) ಮುನ್ನಡೆಸಿದರು?

Ans
1. ಸುಭಾಷ್ ಚಂದ್ರ ಬೋಸ್
2. ಮಹಾತ್ಮ ಗಾಂಧಿ ✔
3. ಲಾಲಾ ಲಜಪತ ರಾಯ್
4. ಜವಾಹರಲಾಲ್ ನೆಹರು

Q.102 ಈ ಕೆಳಗಿನವರಲ್ಲಿ ದೆಹಲಿಯಲ್ಲಿ 1857 ರ ದಂಗೆಯ ನಾಯಕ ಯಾರಾಗಿದ್ದರು?

Ans
1. ಎರಡನೇ ಬಹದ್ದೂರ್ ಷಾ ✔
2. ಬೇಗಂ ಹಜ್ರತ್ ಮಹಲ್
3. ಮಂಗಲ್ ಪಾಂಡೆ
4. ನಾನಾ ಸಾಹಿಬ್

Q.103 $\frac{4}{7}, \frac{5}{21}$ ಮತ್ತು $\frac{8}{63}$ ಗಳ ಲ.ಸಾ.ಅ ವನ್ನು ಕಂಡುಹಿಡಿಯಿರಿ.

Ans
1. $\frac{40}{7}$ ✔
2. $\frac{40}{63}$
3. $\frac{1}{7}$
4. $\frac{1}{63}$

Q.104 ಒಂದು ವೇಳೆ $\alpha : \beta = 15 : 22$ ಮತ್ತು $\beta : \gamma = 12 : 13$ ಆಗಿದ್ದರೆ, $\alpha : \beta : \gamma$ ದ ಮೌಲ್ಯ ಎಷ್ಟು?

Ans
1. 90 : 143 : 132
2. 45 : 66 : 143
3. 90 : 132 : 143 ✔
4. 90 : 66 : 143

Q.105 ಪ್ರತಿ ವರ್ಷದ ಜನವರಿ 1ನೇ ತಾರೀಖಿನಂದು ಯಾವ ದಿನವನ್ನು ಆಚರಿಸಲಾಗುತ್ತದೆ?

Ans
1. ಜಾಗತಿಕ ಕುಟುಂಬ ದಿನಾಚರಣೆ ✔
2. ಅಂತಾರಾಷ್ಟ್ರೀಯ ಯೋಗ ದಿನಾಚರಣೆ
3. ಭೂ ದಿನಾಚರಣೆ
4. ವಿಶ್ವ ಆರೋಗ್ಯ ದಿನಾಚರಣೆ

Q.106 2019 ರ ಪೌರತ್ವ (ತಿದ್ದುಪಡಿ) ಕಾಯ್ದೆಯು ಈ ಕೆಳಗಿನ ಯಾವ ನೆರೆಯ ದೇಶಗಳಿಂದ ಬಂದ ಅಧಿಸೂಚಿತ ಸಮುದಾಯಗಳಿಗೆ ಸೇರಿದ ವಲಸಿಗರಿಗೆ ನಿರ್ದಿಷ್ಟವಾಗಿ ಅನ್ವಯಿಸುತ್ತದೆ?

Ans
1. ಶ್ರೀಲಂಕಾ, ಮ್ಯಾನ್ಮಾರ್ ಮತ್ತು ಪಾಕಿಸ್ತಾನ
2. ನೇಪಾಳ, ಭೂತಾನ್ ಮತ್ತು ಬಾಂಗ್ಲಾದೇಶ
3. ಮಾಲ್ಡೀವ್ಸ್, ಅಫ್ಘಾನಿಸ್ತಾನ ಮತ್ತು ಭೂತಾನ್
4. ಅಫ್ಘಾನಿಸ್ತಾನ, ಬಾಂಗ್ಲಾದೇಶ ಮತ್ತು ಪಾಕಿಸ್ತಾನ ✔

Generated by rank.qmaths.in

Get the Toppers Choice
BLACKBOOK VOCAB APP - Download Now
GET IT ON Google Play

Q.107 ಮೊಹಮ್ಮದ್ ಖಾಸಿಂ ನಾನೋತ್ವಿ ಮತ್ತು ರಶೀದ್ ಅಹ್ಮದ್ ಗಂಗೋಹಿ ಅವರು ಈ ಕೆಳಗಿನ ಯಾವ ಚಳುವಳಿಯನ್ನು ಸ್ಥಾಪಿಸಿದರು?

Ans
1. ವಹಾಬಿ ಚಳುವಳಿ
2. ಶರಿಯಾ ಚಳವಳಿ
3. ಪಾಗಲ್ ಪಂಥಿ ಚಳುವಳಿ
4. ದೇವಬಂದ್ ಚಳುವಳಿ

Q.108 ಒಬ್ಬ ಅಂಗಡಿಯವನು ಒಂದು ವಸ್ತುವಿನ ನಮೂದಿತ ಬೆಲೆಯನ್ನು ಅದರ ಅಸಲು ಬೆಲೆಗಿಂತ 90% ರಷ್ಟು ಹೆಚ್ಚಿಸಿ ನಿಗದಿಪಡಿಸುತ್ತಾನೆ. ಹಾಗಾದರೆ ನಮೂದಿತ ಬೆಲೆಯ ಮೇಲೆ ಶೇಕಡಾವಾರು ಎಷ್ಟು ರಿಯಾಯಿತಿಯನ್ನು ನೀಡಿದರೆ ಅವನು 71% ಲಾಭವನ್ನು ಗಳಿಸಲು ಸಾಧ್ಯವಾಗುತ್ತದೆ?

Ans
1. 11%
2. 10%
3. 13%
4. 8%

Q.109 Each vowel in the word COURAGE is changed to the letter immediately following it in the English alphabetical order, and each consonant is changed to the letter immediately preceding it in the English alphabetical order. Which of the following letters will be fifth from the right in the new group of letters thus formed?

Ans
1. A
2. T
3. V
4. U

Q.110 ಈ ಕೆಳಗಿನ ದತ್ತಾಂಶದ ಸರಾಸರಿಯನ್ನು ಕಂಡುಹಿಡಿಯಿರಿ.

12, 3, 18, 17, 4, 9, 17, 19, 20, 15, 8, 17, 2, 3, 16, 11, 3, 1, 0, ಮತ್ತು 5

Ans
1. 11
2. 9
3. 10
4. 8

Q.111 ಒಂದು ನಿರ್ದಿಷ್ಟ ಸಂಕೇತ ಭಾಷೆಯಲ್ಲಿ, 'pull bush map' ಅನ್ನು 'hn ha lv' ಎಂದು ಸಂಕೇತಿಸಲಾಗುತ್ತದೆ ಮತ್ತು 'kite input pull' ಅನ್ನು 'ha of bq' ಎಂದು ಸಂಕೇತಿಸಲಾಗಿದೆ. ಹಾಗಾದರೆ ಕೊಟ್ಟಿರುವ ಭಾಷೆಯಲ್ಲಿ 'pull' ಅನ್ನು ಹೇಗೆ ಸಂಕೇತಿಸಲಾಗುತ್ತದೆ?

Ans
1. lv
2. ha
3. of
4. hn

Q.112 2024-25ರ ವಿಜಯ್ ಹಜಾರೆ ಟ್ರೋಫಿಯನ್ನು ಗೆದ್ದ ತಂಡ ಯಾವುದು?

Ans
1. ಹರಿಯಾಣ
2. ಗುಜರಾತ್
3. ವಿದರ್ಭ
4. ಕರ್ನಾಟಕ

Generated by rank.qmaths.in

Get the Toppers Choice
BLACKBOOK VOCAB APP - Download Now
GET IT ON Google Play

Q.113 ಈ ಕೆಳಗಿನವರಲ್ಲಿ 'ಇಂಡಿಯನ್ ರಿನೈಸಾನ್ಸ್: ದ ಮೋದಿ ಡಿಕೇಡ್' (Indian Renaissance: The Modi Decade) ಎಂಬ ಪುಸ್ತಕದ ಸಂಪಾದಕರು ಯಾರು?

Ans
1. ಅರುಣ್ ಶೌರಿ
2. ಡಾ. ಐಶ್ವರ್ಯಾ ಪಂಡಿತ್
3. ಸೌಮಿತ್ರ ಚಟರ್ಜಿ
4. ಡಾ. ಕೆ.ಎಸ್. ಚೌಹಾಣ್

Q.114 ಇಂಗ್ಲಿಷ್ ವರ್ಣಮಾಲೆಯ ಅನುಕ್ರಮವನ್ನು ಆಧರಿಸಿ, ಒಂದು ನಿರ್ದಿಷ್ಟ ರೀತಿಯಲ್ಲಿ TWSP ಎಂಬುದು MPLI ಗೆ ಸಂಬಂಧಿಸಿದೆ. ಅದೇ ರೀತಿಯಲ್ಲಿ, LOKH ಎಂಬುದು EHDA ಗೆ ಸಂಬಂಧಿಸಿದೆ. ಹಾಗಾದರೆ ಅದೇ ತರ್ಕವನ್ನು ಅನುಸರಿಸಿದಾಗ, ನೀಡಿರುವ ಯಾವ ಆಯ್ಕೆಗೆ PSOL ಎಂಬುದು ಸಂಬಂಧಿಸಿದೆ?

Ans
1. ILHE
2. IMGM
3. ILGE
4. IKGE

Q.115 ಮೌಲ್ಯಮಾಪನ ಮಾಡಿ : 30 + [{-9 × (26 - 14 + 6)}]

Ans
1. -132
2. -133
3. -134
4. -135

Q.116 ಈ ಕೆಳಗೆ ಕೊಟ್ಟಿರುವ ಸರಣಿಯಲ್ಲಿನ ಪ್ರಶ್ನಾರ್ಥಕ ಚಿಹ್ನೆಯ (?) ಸ್ಥಳದಲ್ಲಿ ಯಾವ ಸಂಖ್ಯೆ ಬರಬೇಕು?

57 58 62 71 87 112 ?

Ans
1. 76
2. 148
3. 144
4. 137

Q.117 ಪೌರತ್ವ (ತಿದ್ದುಪಡಿ) ಕಾಯ್ದೆ, 2019 ರ ಅಡಿಯಲ್ಲಿ, ಒಂದುವೇಳೆ ____________ ಸಾಗರೋತ್ತರ ಭಾರತೀಯ ನಾಗರಿಕರ (OCI) ನೋಂದಣಿಯನ್ನು ರದ್ದುಗೊಳಿಸಬಹುದು.

Ans
1. ಭಾರತದ ಸಾಗರೋತ್ತರ ನಾಗರಿಕನು ತೆರಿಗೆ ಬಾಧ್ಯತೆಗಳನ್ನು ಪಾಲಿಸಲು ನಿರಾಕರಿಸಿದರೆ
2. ಭಾರತದ ಸಾಗರೋತ್ತರ ನಾಗರಿಕರು ಔಪಚಾರಿಕವಾಗಿ ದ್ವಿಪೌರತ್ವ ಸ್ಥಾನಮಾನವನ್ನು ಹೊಂದಲು ಕೋರಿದರೆ
3. ಭಾರತದ ಸಾಗರೋತ್ತರ ನಾಗರಿಕನು ಪೌರತ್ವ ಕಾಯ್ದೆ ಅಥವಾ ಯಾವುದೇ ಅಧಿಸೂಚಿತ ಕಾನೂನನ್ನು ಉಲ್ಲಂಘಿಸಿದರೆ
4. ಭಾರತದ ಸಾಗರೋತ್ತರ ನಾಗರಿಕನು ಶಾಶ್ವತವಾಗಿ ಬೇರೆ ದೇಶಕ್ಕೆ ಸ್ಥಳಾಂತರಗೊಂಡರೆ

Q.118 ವಿಶ್ವಸಂಸ್ಥೆಯು ಈ ಕೆಳಗಿನ ಯಾವ ದಿನಾಂಕದಂದು ಮೊದಲ ವಿಶ್ವ ಶುದ್ಧ ಇಂಧನ ದಿನಾಚರಣೆಯನ್ನು (World Clean Energy Day) ಆಚರಿಸಿತು?

Ans
1. 26 ಜನವರಿ 2022
2. 26 ಜನವರಿ 2024
3. 6 ಜೂನ್ 2020
4. 6 ಜೂನ್ 2018

Q.119 ಪ್ರಮುಖ ಇಮೇಲ್ ಪ್ರೊವೈಡರ್‌ಗಳಲ್ಲಿ ಇಮೇಲ್ ಅಟ್ಯಾಚ್‌ಮೆಂಟ್‌ಗಳಿಗೆ ಸಾಮಾನ್ಯವಾಗಿ ಸ್ವೀಕರಿಸಲಾಗುವ ಗರಿಷ್ಠ ಗಾತ್ರ ಎಷ್ಟು?

Ans
1. 100MB
2. 50MB
3. 25MB
4. 10MB

Generated by rank.qmaths.in

Get the Toppers Choice
BLACKBOOK VOCAB APP - Download Now
GET IT ON Google Play

**Q.120** ಸರಳೀಕರಿಸಿ $\sqrt{\frac{1764}{2025}} \times \sqrt{\frac{625}{441}} - \left(\frac{3}{4}\right)^{-2}$.

**Ans**

✔ 1. $-\frac{2}{3}$

✗ 2. $-\frac{1}{3}$

✗ 3. $-\frac{22}{63}$

✗ 4. $\frac{26}{9}$

"

Blackbook